**ಬಿಡುವು**

ಶ್ರೀ ಗಣೇಶ ಚತುರ್ಥಿಯ ಪ್ರಯುಕ್ತ ಇಂದು ನಮ್ಮ ಕಚೇರಿಗೆ ಬಿಡುವು. ಕಾರಣ, ನಾಳೆ ಭಾನುವಾರದ 'ಜನತಾವಾಣಿ' ಸಂಚಿಕೆ ಪ್ರಕಟಗೊಳ್ಳುವುದಿಲ್ಲ.

- ವ್ಯವಸ್ಥಾಪಕರು

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

**ಶುಭಾಶಯಗಳು**

ಶ್ರೀ ಗಣೇಶ ಚತುರ್ಥಿಯ ಈ ಶುಭ ಸಂದರ್ಭದಲ್ಲಿ ಸಮಸ್ತರಿಗೆ ಹಾರ್ದಿಕ ಶುಭಾಶಯಗಳು.

- ಸಂಪಾದಕರು

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ

ಶನಿವಾರ, ಸೆಪ್□□ಂ□□□ 07, 2024

ಸಂಪುಟ : 51 ಸಂಚಿಕೆ : 116 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




TANISHQ

**ಗಣೇಶ ಚತುರ್ಥಿಯ ಶುಭಾಶಯಗಳು**

ಎಂಬ ಪಠಣವನ್ನು ಗಾಳಿಯ ಮೂಲಕ ಪ್ರತಿಧ್ವನಿಸಲು ಬಿಡಿ ಹಾಗೂ ನಮ್ಮ ಬದುಕಿಗೆ ಬಣ್ಣ, ಸಂತೋಷ ಹಾಗೂ ಸಕಾರಾತ್ಮಕತೆಯನ್ನು ತಂದುಕೊಡಿ

**20%** ವರೆಗೆ ಕಡಿತ* ವಜ್ರಾಭರಣದ ಮೌಲ್ಯದ ಮೇಲೆ

ಯಾವುದೇ ಜ್ಯುವೆಲ್ಲರ್‌ನಿಂದ ಖರೀದಿಸಿದ ಹಳೆಯ ಚಿನ್ನದ ಮೇಲೆ **100%*** ವಿನಿಮಯ ಮೌಲ್ಯ ಪಡೆಯಿರಿ

ನಂ.1, ಗ್ರೌಂಡ್ ಫ್ಲೋರ್, ತೋಶನಿ ಎಂಪೋರಿಯಾ, ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ. **63647-95111**




## ರಜಾ ಸೂಚನೆ

ಪರ್ಯುಷಣ್ ಮತ್ತು ಗೌರಿ-ಗಣೇಶ ಚತುರ್ಥಿಯ ಶುಭಾಶಯಗಳು

ಪರ್ಯುಷಣ್ ಹಬ್ಬದ ಪ್ರಯುಕ್ತ ದಿನಾಂಕ : 07.09.2024ರ ಶನಿವಾರ ನಮ್ಮ ಅಂಗಡಿಗಳಿಗೆ ರಜಾ ಇರುತ್ತದೆ. ಮಾನ್ಯ ನಮ್ಮೆಲ್ಲಾ ಗ್ರಾಹಕರು ಸಹಕರಿಸಬೇಕಾಗಿ ವಿನಂತಿ.

**ಶಾಂತಲಾ**
ಚಾಮರಾಜಪೇಟೆ, ದಾವಣಗೆರೆ-577 001.

**ಶಾಂತಲಾ ಬ್ರ್ಯಾಂಚ್**
ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ.

## ಈ ಸುದಿನ ಗಣೇಶಣ್ಣನ ಜನ್ಮದಿನ ಹಾರ್ದಿಕ ಶುಭಾಶಯಗಳು





ಕ್ರಿಯಾಶೀಲ ವಾಣಿಜ್ಯೋದ್ಯಮಿಗಳೂ, ದಾವಣಗೆರೆ ಷುಗರ್ಸ್ ವ್ಯವಸ್ಥಾಪಕ ನಿರ್ದೇಶಕರೂ, ನನ್ನ ಆತ್ಮೀಯರೂ ಆದ

**ಶ್ರೀ ಎಸ್.ಎಸ್. ಗಣೇಶಣ್ಣ**

ಅವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.

ಅಪ್ಪಾಜಿ ಎಸ್ಸೆಸ್‌ರಂತ ಆರೋಗ್ಯ ಭಾಗ್ಯವನ್ನು ತಮಗೂ, ತಮ್ಮ ಕುಟುಂಬಕ್ಕೂ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಸರ್ವರಿಗೂ ಗೌರಿ-ಗಣೇಶ ಹಬ್ಬದ ಶುಭಾಶಯಗಳು



**ಎಂ.ಹೆಚ್. ಬಸವರಾಜ್ (ರಾಜಣ್ಣ)** ಶಾಮನೂರು.

|| ಶ್ರೀ ನಿಡಗುಂದಿ ವೀರಭದ್ರೇಶ್ವರ ಪ್ರಸನ್ನ || || ಶ್ರೀ ಮಜ್ಜಿಗೇರಿ ಬಸವೇಶ್ವರ ಪ್ರಸನ್ನ||




## ಐದನೇ ವರ್ಷದ ಪುಣ್ಯಸ್ಮರಣೆ

### ಶರಣೆ ದಿ. ಶೋಭಾ ಶರಣಪ್ಪ ಬೇವಿನಮಟ್ಟಿ

(ಬಸಮ್ಮ ನೀಲಗುಂದ)

ನಿಧನ : 07.09.2019

(ದಿ|| ಸರ್ವಮ್ಮ, ದಿ|| ಎನ್. ಮುರಿಗೆಪ್ಪ ಇವರ ಮಗಳು ಕಾಯಿಪೇಟೆ, ದಾವಣಗೆರೆ)

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು.

ಸದಾ ನಿಮ್ಮ ಸ್ಮರಣೆಯಲ್ಲಿರುವ....

ಪತಿ : ಶರಣಪ್ಪ ಬೇವಿನಮಟ್ಟಿ ಮಕ್ಕಳಾದ : ಬಿ.ಎಸ್. ವೀರೇಶ್ ಬಿ.ಎಸ್. ವಿಜಯಕುಮಾರ್, ಬಿ.ಎಸ್. ಶಿಲ್ಪ

ಸೊಸೆ : ಪಿ.ಎ. ಉಷಾ, ಅಳಿಯ : ಕೆ.ಎಂ. ಗಿರೀಶ್ ಹಾಗೂ ಬಂಧು-ಮಿತ್ರರು.

**ಶರಣಪ್ಪ ಬೇವಿನ ಮಟ್ಟಿ (ಇಲಕಲ್ಲ)**

ವಿಳಾಸ : ಶ್ರೀ ವೀರಭದ್ರೇಶ್ವರ ಕೃಪ

#559/31/63, 1ನೇ ಬಿ ಮುಖ್ಯ ರಸ್ತೆ, 7ನೇ ಕ್ರಾಸ್, ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತ, ಶ್ರೀ ಸಂಜೀವಿನಿ ಆಂಜನೇಯ ಸ್ವಾಮಿ ದೇವಸ್ಥಾನ ರಸ್ತೆ, ದಾವಣಗೆರೆ - 577005

ಮೊ. : 99725 50168, 80954 20524

## ಜನ್ಮದಿನದ ಶುಭಾಶಯಗಳು



ಖ್ಯಾತ ಕೈಗಾರಿಕೋದ್ಯಮಿಗಳು, ಪ್ರಖ್ಯಾತ ವಾಣಿಜ್ಯೋದ್ಯಮಿಗಳು, 'ವಾಣಿಜ್ಯ ಸಿರಿ' ಪ್ರಶಸ್ತಿ ಪುರಸ್ಕೃತರು, ಆತ್ಮೀಯರೂ ಆಗಿರುವ

**ಸನ್ಮಾನ್ಯ ಶ್ರೀ ಎಸ್.ಎಸ್. ಗಣೇಶ್**

ಅವರಿಗೆ 64ನೇ ವರ್ಷದ ಜನ್ಮದಿನದ ಹಾರ್ದಿಕ ಶುಭಾಶಯಗಳು

ದೇವರು ತಮಗೆ ಸಂತಸ, ಸಮೃದ್ಧಿ ಹಾಗೂ ಸುದೀರ್ಘ ಆರೋಗ್ಯಕರ ಜೀವನ ದಯಪಾಲಿಸಲಿ ಎಂಬ ಶುಭ ಹಾರೈಕೆಗಳೊಂದಿಗೆ

**ಎಸ್.ಎಸ್.ರವರ ಆಪ್ತ ಬಳಗ, ದಾವಣಗೆರೆ**





ಸಮಸ್ತರಿಗೂ ಗೌರಿ-ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು



ಅಥಣಿ ವೀರಣ್ಣ – ಹಿರಿಯ ಲೆಕ್ಕ ಪರಿಶೋಧಕರು
ಅಣಬೇರು ರಾಜಣ್ಣ – ಹೋಟೆಲ್ ಉದ್ಯಮಿಗಳು
ಎಸ್.ಕೆ. ವೀರಣ್ಣ – ವರ್ತಕರು
ಡಿ.ಡಿ. ಬಸವರಾಜಪ್ಪ – ಉದ್ಯಮಿಗಳು
ಅಂದನೂರು ಬಾಬಣ್ಣ – ವರ್ತಕರು
ಡಾ|| ದೀಪಕ್ ಬೋಂದಾಡೆ – ಹಿರಿಯ ವೈದ್ಯರು
ಡಾ|| ಸುರೇಂದ್ರ ಶೆಟ್ಟಿ – ಹಿರಿಯ ವೈದ್ಯರು



ದಿನೇಶ್ ಕೆ. ಶೆಟ್ಟಿ – ಧೂಡಾ (DHUDA) ಅಧ್ಯಕ್ಷರು
ಸುರಭಿ ಶಿವಮೂರ್ತಿ – ಸದಸ್ಯರು, ಮಹಾನಗರಪಾಲಿಕೆ
ಬಿ.ಎನ್. ಮಲ್ಲೇಶ್ – ಹಿರಿಯ ಪತ್ರಕರ್ತರು
ಕುರುಡಿ ಗಿರೀಶ್ – ಕ್ರೀಡಾ ಪ್ರೋತ್ಸಾಹಕರು
ಎಸ್.ಎಲ್. ಆನಂದಪ್ಪ – ಉದ್ಯಮಿಗಳು
ಹೆಚ್.ಎನ್. ಬಸವರಾಜ್ – ಉದ್ಯಮಿಗಳು
ರವಿಕುಮಾರ್ ಗಾಂಧಿ – ಉದ್ಯಮಿಗಳು



**ಡಾ. ಉದಯಶಿವಕುಮಾರ್**
ಉದ್ಯಮಿಗಳು



# ಮಲೇಬೆನ್ನೂರಿನಲ್ಲಿ ಹಿಂದೂ ಮಹಾಗಣಪತಿ ಪ್ರತಿಷ್ಠಾಪನೆಗೆ ಸಿದ್ಧಗೊಂಡ ವೇದಿಕೆ



ಮಲೇಬೆನ್ನೂರು ಪಟ್ಟಣದ ನೀರಾವರಿ ಇಲಾಖೆಯ ಮೈದಾನದಲ್ಲಿ 3ನೇ ವರ್ಷದ ಮಹಾಗಣಪತಿ ಪ್ರತಿಷ್ಠಾಪನೆ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದ್ದು, ಅದಕ್ಕಾಗಿ ಸನಾತನ ವೇದಿಕೆ ಮತ್ತು ಬಾಲಗಂಗಾಧರ್ ತಿಲಕ್ ಮಹಾಮಂಟಪ ಸಿದ್ದಗೊಂಡಿದೆ.

ಆರ್ಟ್ಸ್ ಮಂಜು ಮತ್ತು ದೊರೆಸ್ವಾಮಿ ಇವರು ವೇದಿಕೆ, ಮಹಾಮಂತಪ ಹಾಗೂ ಮಹಾದ್ವಾರಗಳನ್ನು ಬಹಳ ಸುಂದರವಾಗಿ ನಿರ್ಮಿಸಿದ್ದು, ಎಲ್ಲರ ಗಮನ ಸೆಳೆಯುತ್ತಿದೆ.

ಶುಕ್ರವಾರ ಸಂಜೆ ವೇಳೆಗೆ ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿದೆ ಎಂದು 3ನೇ ವರ್ಷದ ಹಿಂದೂ ಮಹಾಗಣಪತಿ ಸಮಿತಿ ಅಧ್ಯಕ್ಷ ಅಶೋಕ್ ಯರೇಚಿಕ್ಕನಹಳ್ಳಿ ತಿಳಿಸಿದರು.

ಶನಿವಾರ ಬೆಳಿಗ್ಗೆ 9 ಗಂಟೆಗೆ ಕಲ್ಲೇಶ್ವರ ದೇವಸ್ಥಾನದ ಬಳಿ ಇರುವ ಶಿಲ್ಪಿ ರಾಮಾಚಾರಿ ಅವರ ಮನೆಯಿಂದ ಮೆರವಣಿಗೆ ಮೂಲಕ ಕಲಾತಂಡದೊಂದಿಗೆ ಮಹಾಗಣಪತಿ ವೇದಿಕೆಗೆ ತಂದು ಪೂಜೆಯೊಂದಿಗೆ ಪ್ರತಿಷ್ಠಾಪಿಸಿದ ನಂತರ ಎಲ್ಲರಿಗೂ ಪ್ರಸಾದ ವಿತರಿಸಲಾಗುವುದೆಂದು ಸಮಿತಿ ಖಜಾಂಚಿ ಪಿ.ಆರ್.ರಾಜು ತಿಳಿಸಿದರು.

ಜಿ.ಪಂ. ಮಾಜಿ ಸದಸ್ಯ ಬಿ.ಎಂ.ವಾಗೀಶ್ ಸ್ವಾಮಿ ಅವರು, ಶುಕ್ರವಾರ ಬೆಳಿಗ್ಗೆ ವೇದಿಕೆ ಬಳಿ ಆಗಮಿಸಿ, ಸಿದ್ಧತೆ ವೀಕ್ಷಣೆ ಮಾಡಿ, ಅಗತ್ಯ ಸಲಹೆ-ಸಹಕಾರ ನೀಡಿದರು.

ಸಂಜೆ ಸಿಪಿಐ ಸುರೇಶ್ ಅಗರಿ, ಪಿಎಸ್ಐ ಪ್ರಭು ಕೆಳಗಿನಮನಿ, ಉಪತಹಶೀಲ್ದಾರ್ ಆರ್.ರವಿ, ಪುರಸಭೆ ಅಧಿಕಾರಿಗಳಾದ ಉಮೇಶ್, ಶಿವರಾಜ್, ಮಂಜುನಾಥ್ ಅವರು ಭೇಟಿ ನೀಡಿ, ಮುಂಜಾಗ್ರತಾ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

# ಹರಿಹರದಲ್ಲಿ ಸಡಗರ - ಸಂಭ್ರಮದ ಗಣೇಶೋತ್ಸವ

ಹರಿಹರ, ಸೆ.6- ನಗರದಲ್ಲಿ ಗಣೇಶ ಹಬ್ಬವನ್ನು ಶ್ರದ್ಧಾ - ಭಕ್ತಿ, ಸಡಗರ - ಸಂಭ್ರಮದ ಆಚರಣೆಗೆ ಸಕಲ ಸಿದ್ಧತೆ ಜೋರಾಗಿ ನಡೆದಿದೆ.



ವಿನಾಯಕನ ಮಣ್ಣಿನ ಮೂರ್ತಿಯನ್ನು ನಾಳೆ ದಿನಾಂಕ 7 ರ ಶನಿವಾರ ಮನೆಗಳಲ್ಲಿ ಮತ್ತು ಸಂಘ - ಸಂಸ್ಥೆಯವರು ಓಣಿ, ಕೇರಿಗಳಲ್ಲಿ ಪ್ರತಿಷ್ಠಾಪನೆ ಮಾಡಿ ಪೂಜಿಸಲಾಗುತ್ತದೆ.

ಗಣೇಶನಿಗೆ ವಿವಿಧ ಬಗೆಯ ಆಹಾರ ಪಕ್ವಾನ್ನಗಳು, ಹಲವು ಬಗೆಯ ಫಲಗಳನ್ನು ನೈವೇದ್ಯ ಮಾಡಿ ಷೋಡಶೋಪಚಾರದೊಂದಿಗೆ ಮಹಾಮಂಗಳಾರತಿ ಮಾಡಿ ಭಕ್ತಿ ಸಮರ್ಪಿಸಲಾಗುತ್ತದೆ. ಭಕ್ತರು ತಮ್ಮ ಅನುಕೂಲಕ್ಕೆ ತಕ್ಕಂತೆ ಒಂದು, ಮೂರು, ಐದು, ಏಳು, ಒಂಬತ್ತು, ಹನ್ನೊಂದು, ಇಪ್ಪತ್ತೊಂದು ದಿನಗಳವರೆಗೂ ಪ್ರತಿ ನಿತ್ಯ ಹೋಮ, ಹವನ ಸೇರಿದಂತೆ ವಿವಿಧ ನಮೂನೆಯಲ್ಲಿ, ಭಕ್ತಿಯಿಂದ ಗಣಪತಿಯನ್ನು ಪೂಜಿಸಿ ಬಾವಿ ಮತ್ತು ನದಿಯಲ್ಲಿ ವಿಸರ್ಜನೆ ಮಾಡುವುದು ಪ್ರತೀತಿ.

ಗಣಪತಿ ಹಬ್ಬದ ಸಮಯದಲ್ಲಿ ಮಾರುಕಟ್ಟೆಯಲ್ಲಿ ದಿನ ನಿತ್ಯಕ್ಕಿಂತ ಹೆಚ್ಚು ಸಾರ್ವಜನಿಕರು ಖರೀದಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಾರೆ. ಬಾಳೆ ಕಂಬ, ಹೂವು, ಹಣ್ಣು, ಕಾಯಿ, ಎಲೆ, ತರಕಾರಿ, ಬಟ್ಟೆ, ದಿನಸಿ ಪದಾರ್ಥಗಳು, ಅಲಂಕಾರಿಕ ವಸ್ತುಗಳು ಜೊತೆಗೆ 1ರಿಂದ 18 ಅಡಿ ಎತ್ತರದ ವಿವಿಧ ಗಾತ್ರದ ವಿನಾಯಕ ಮೂರ್ತಿಯ ಖರೀದಿ ಮಾಡುವಲ್ಲಿ ನಿರತರಾಗಿದ್ದರು.

ಮುಖ್ಯ ರಸ್ತೆ, ಹರಪನಹಳ್ಳಿ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಶೋಭಾ ಟಾಕೀಸ್ ರಸ್ತೆ, ಪೋಸ್ಟ್ ಆಫೀಸ್ ರಸ್ತೆ, ದೇವಸ್ಥಾನ ರಸ್ತೆಯಲ್ಲಿ ಜನಸಂದಣಿ ಹೆಚ್ಚಾಗಿ, ಪಾದಚಾರಿಗಳಿಗೆ ಮತ್ತು ವಾಹನ ಸವಾರರ ಸಂಚಾರಕ್ಕೆ ಬಹಳಷ್ಟು ಹರ ಸಾಹಸ ಪಡುವಂತಾಗಿರುವುದು ಕಂಡುಬಂದಿತು.

ದೇವಸ್ಥಾನ ರಸ್ತೆಯ ರೇಣುಕಾ ಮಂದಿರದ ಆವರಣ ಸೇರಿದಂತೆ ಹಲವಾರು ಮಳಿಗೆಗಳಲ್ಲಿ ವಿವಿಧ ಬಣ್ಣದ ಗಣಪತಿ ಮೂರ್ತಿಗಳ ವ್ಯಾಪಾರ ಜೋರಾಗಿಯೇ ನಡೆದಿತ್ತು.

ಗಾಂಧಿ ಮೈದಾನದಲ್ಲಿ ಸಾರ್ವಜನಿಕ ವಿನಾಯಕ ಸಂಘ, ಪೇಟೆ ಆಂಜನೇಯ ಸ್ವಾಮಿ ದೇವಸ್ಥಾನ ಆವರಣದಲ್ಲಿ ಹಿಂದೂ ಮಹಾಗಣಪತಿ ಸೇವಾ ಸಮಿತಿ, ಹೊಸಭರಂಪುರ ಬಡಾವಣೆಯ ಭರಂಪೂರ ಯುವಕ ಸಂಘ, ನಡವಲಪೇಟೆ ಬಸವೇಶ್ವರ ಯುವಕ ಸಂಘ, ಮರಾಠಗಲ್ಲಿ ಮಿತ್ರಮಂಡಳಿ ಯುವಕ ಸಂಘ, ಎ.ಕೆ. ಕಾಲೋನಿ ಏಕದಂತ ಯುವಕ ಸಂಘ, ಎಸ್.ಎಸ್.ಕೆ. ಯುವಕ ಸಂಘ, ನಡವಲಪೇಟೆ ಯುವಕ ಸಂಘ, ಕೈಲಾಸ ನಗರ ಯುವಕ ಸಂಘ, ಪೌರ ಕಾರ್ಮಿಕರ ಯುವಕ ಸಂಘ, ಟ್ಯಾಕ್ಸಿ ಚಾಲಕರು ಮತ್ತು ಮಾಲೀಕರ ಸಂಘ, ಶಿವ ಯುವಕ ಸಂಘ, ವಜ್ರಕಾಯ ಯುವಕ ಸಂಘ, ಶಿಬಾರ ಯುವಕ ಸಂಘ, ಕುರುಬರ ಬೀದಿ ಯುವಕ ಸಂಘ, ಮಹಜೇನಹಳ್ಳಿ ಗ್ರಾಮದೇವತೆ ಯುವಕ ಸಂಘ, ಗರಡಿ ಮನೆ ಯುವಕ ಸಂಘ, ಸುಣಗಾರ ಬೀದಿ ಯುವಕ ಸಂಘ, ಹಳ್ಳದಕೇರಿ ಯುವಕ ಸಂಘ, ವಿಜಯನಗರ ಯುವಕ ಸಂಘ, ವಿದ್ಯಾನಗರ ಯುವಕ ಸಂಘ, ಹರ್ಲಾಪುರ ಬಡಾವಣೆ ಯುವಕ ಸಂಘ, ಬೆಸ್ಕಾಂ ನೌಕರರ ಸಂಘ, ಸೇರಿದಂತೆ ಸುಮಾರು 56 ಸಂಘದವರು ಗಣಪತಿ ಪ್ರತಿಷ್ಠಾಪನೆ ಮಾಡಿ ವಿಶೇಷ ಪೂಜೆ ಮಾಡುವ ಮೂಲಕ ಗಣಪತಿಯನ್ನು ಆರಾಧಿಸುತ್ತಾರೆ. ಜೊತೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಅನ್ನ ಸಂತರ್ಪಣೆ ಆಯೋಜಿಸಿ ಶ್ರದ್ಧಾ - ಭಕ್ತಿಯಿಂದ ಹಬ್ಬ ಆಚರಿಸಲಾಗುತ್ತದೆ.

ನಗರಸಭೆ ಎಲ್ಲಾ ಕಡೆಯಲ್ಲಿ ಸ್ವಚ್ಛತೆ, ನೀರು ಸರಬರಾಜಿಗೆ ಹೆಚ್ಚು ಆದ್ಯತೆ ಕೊಟ್ಟು, ವಿಸರ್ಜನೆ ಸ್ಥಳದಲ್ಲಿ ವಿದ್ಯುತ್ ಪೂರೈಕೆ ವ್ಯವಸ್ಥೆ, ಸ್ವಚ್ಛತೆ ಮಾಡಿಸಿದೆ. ವಿದ್ಯುತ್ ಪೂರೈಕೆಯಲ್ಲಿ ಮತ್ತು ವಿದ್ಯುತ್ ಅವಘಡ ನಡೆಯದಂತೆ ಬೆಸ್ಕಾಂ ಇಲಾಖೆ ಎಚ್ಚರಿಕೆ ವಹಿಸಿದೆ. ಅಗ್ನಿಶಾಮಕ ದಳ ಅಗ್ನಿ ಅವಘಡ ನಡೆಯದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ.

## ಸರ್ಕಾರಿ ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಸೆ.6- ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಎಂ.ಎಂ.ಟಿ.ಎಂ 1, ಡಿಎಂಎಂ 20, ಸಿಒಪಿಎ 20, ವೆಲ್ಡರ್ 34 ಹಾಗೂ ರೋಬೋಟಿಕ್ಸ್ 12 ಖಾಲಿ ಇರುವ ಸ್ಥಾನಗಳ ಪ್ರವೇಶಕ್ಕೆ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಐಟಿಐ ಪ್ರಾಚಾರ್ಯರನ್ನು ಸಂಪರ್ಕಿಸಬಹುದೆಂದು ತಿಳಿಸಲಾಗಿದೆ.

## ಸಬ್ ಜ್ಯೂನಿಯರ್ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿ

ದಾವಣಗೆರೆ, ಸೆ.6- ಸಬ್ ಜೂನಿಯರ್ ರಾಜ್ಯ ಮಟ್ಟದ ಬಾಲಕ - ಬಾಲಕಿಯರ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಗಳು ಇದೇ ದಿನಾಂಕ 15 ಮತ್ತು 16ರಂದು ಹಿರಿಯೂರಿನಲ್ಲಿ ನಡೆಯಲಿವೆ. ವಿವರಕ್ಕೆ ಜಿಲ್ಲಾ ಬಾಲ್ ಬ್ಯಾಡ್ಮಿಂಟನ್ ಕಾರ್ಯದರ್ಶಿ ಉಮೇಶ್ ಮತ್ತು ಕುಮಾರಸ್ವಾಮಿ (944887346, 7892074741) ಅವರನ್ನು ಸಂಪರ್ಕಿಸಬಹುದು.

## 'ದಾವಣಗೆರೆ ಗತ್ತು ನಿಮಗೇನು ಗೊತ್ತು' ಆಲ್ಬಮ್ ಸಾಂಗ್ ಇಂದು ಬಿಡುಗಡೆ

ದಾವಣಗೆರೆ, ಸೆ. 6- ಡಿ-3 ಪ್ರೊಡಕ್ಷನ್ ಹಾಗೂ ಸಿಗ್ಮ ಸ್ಟುಡಿಯೋಸ್ ಅವರ ದಾವಣಗೆರೆ ಹುಡುಗರು ಅಂದರೆ ಹೇಗೆ ಎಂಬುದನ್ನು ತಿಳಿಸುವ 'ದಾವಣಗೆರೆ ಗತ್ತು ನಿಮಗೇನು ಗೊತ್ತು' ಆಲ್ಬಮ್ ಸಾಂಗ್ ನಾಳೆ ದಿನಾಂಕ 7 ರ ಶನಿವಾರ ಬೆಳಿಗ್ಗೆ 11.35 ಕ್ಕೆ ಬಿಡುಗಡೆಗೊಳ್ಳಲಿದೆ ಎಂದು ಡಿ-3 ಪ್ರೊಡಕ್ಷನ್ ನಿರ್ಮಾಪಕ ಆಕಾಶ್ ದೊಂಗರಸೋನೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನವೀನ್ ರಾಜ್ ಸಾಂಗ್‌ಗೆ ನಿರ್ದೇಶನ ನೀಡಿದ್ದು, ರೋನಿತ್ ಅವರ ಸಾಹಿತ್ಯ, ವರುಣ್ ವಿ. ಗೌಡ ಹಾಗೂ ನವೀನ್ ರಾಜ್ ಹಾಡಿದ್ದಾರೆ. ಉಜ್ವಲ್ ಮಾಸ್ಟರ್ ಛಾಯಾಗ್ರಹಣ ಮಾಡಿದ್ದಾರೆಂದು ಹೇಳಿದರು.

ಇದೇ ಮೊದಲ ಬಾರಿಗೆ ಡಿ-3 ಪ್ರೊಡಕ್ಷನ್‌ನಲ್ಲಿ ಆಲ್ಬಮ್ ಸಾಂಗ್ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ 'ದ್ರೋಹಂ' ಎಂಬ ಕಿರುಚಿತ್ರ ನಿರ್ಮಾಣ ಮಾಡಲಾಗುತ್ತದೆ. ದಾವಣಗೆರೆಯಲ್ಲಿ ಯಾವುದೇ ಸಾಂಗ್ ಮಾಡಬೇಕೆಂದರೂ ಬೆಂಗಳೂರಿಗೆ ಹೋಗಲೇಬೇಕು. ಅಲ್ಲಿ ವಿ ಎಫೆಕ್ಟ್ ಮಾಡಿಸಬೇಕು. ನಿರ್ಮಾಪಕರನ್ನು ಹುಡುಕಬೇಕು ಎನ್ನುತ್ತಾರೆ. ಆದರೆ ದಾವಣಗೆರೆಯಲ್ಲಿ ಸಾಂಗ್ ಮಾಡಬೇಕಾದರೆ ನಿಮಗೆ ನಿರ್ಮಾಪಕರು ಸಿಗದೇ ನಿಮ್ಮ ಕನಸನ್ನು ಸಾಯಿಸದೇ ನಮ್ಮ ಬಳಿ ಬನ್ನಿ ನಾವು ನಿಮ್ಮೊಂದಿಗೆ ಕೈಜೋಡಿಸುತ್ತೇವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ನವೀನ್ ರಾಜ್, ಪ್ರೀತಿ ಚಂದ್ರಪ್ಪ, ಉಜ್ವಲ್ ಮತ್ತಿತರರು ಉಪಸ್ಥಿತರಿದ್ದರು.

# ಹತ್ತು ವರ್ಷಗಳಲ್ಲಿ ಸೌರ ಸಾಮರ್ಥ್ಯ 32 ಪಟ್ಟು ಹೆಚ್ಚಳ

## 500 ಜಿ.ಡಬ್ಲ್ಯೂ. ಗುರಿ ತಲುಪಲು ಸಾಧ್ಯ : ಪ್ರಧಾನಿ ನರೇಂದ್ರ ಮೋದಿ

ನವದೆಹಲಿ, ಸೆ.6 - ಸೌರ ಇಂಧನ ಸಾಮರ್ಥ್ಯವನ್ನು ವೇಗವಾಗಿ ಹೆಚ್ಚಿಸಿಕೊಂಡ ಕಾರಣದಿಂದ ಕಳೆದ ಹತ್ತು ವರ್ಷಗಳಲ್ಲಿ ಸೌರ ವಿದ್ಯುತ್ ಉತ್ಪಾದನೆ 32 ಪಟ್ಟು ಹೆಚ್ಚಾಗಿದೆ. ಇದೇ ವೇಗ ಹಾಗೂ ಪ್ರಮಾಣದಲ್ಲಿ ವಿಸ್ತರಣೆ ಮುಂದುವರೆದರೆ 2030ರ ವೇಳೆಗೆ 500 ಜಿ. ಡಬ್ಲ್ಯೂ. ನವೀಕರಣ ಇಂಧನ ಸಾಮರ್ಥ್ಯದ ಗುರಿ ತಲುಪಲು ಸಾಧ್ಯವಾಗಲಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಅಂತರರಾಷ್ಟ್ರೀಯ ಸೌರ ಉತ್ಸವ ಸಮಾರಂಭಕ್ಕೆ ವಿಡಿಯೋ ಸಂದೇಶ ನೀಡಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ, ಮುಂದಿನ ಕೆಲವು ವರ್ಷಗಳಲ್ಲಿ ಭಾರತ ಹಸಿರು ಇಂಧನ ವಲಯದಲ್ಲಿ ದೊಡ್ಡ ಹೆಜ್ಜೆಗಳನ್ನು ಇಡಲಿದೆ. ನವೀಕರಣ ಇಂಧನ ವಲಯಕ್ಕೆ ಸಂಬಂಧಿಸಿದಂತೆ ಪ್ಯಾರಿಸ್ ಬದ್ಧತೆ ಈಡೇರಿರುವ ಮೊದಲ ಜಿ 20 ದೇಶ ಭಾರತ ಆಗಲಿದೆ ಎಂದಿದ್ದಾರೆ.

ಸೌರ ಇಂಧನ ವಲಯದಲ್ಲಿ ಗಣನೀಯ ಸಾಧನೆ ಮಾಡಿರುವ ಕಾರಣದಿಂದ ಭಾರತ ತನ್ನ ಗುರಿ ತಲುಪಲು ಸಾಧ್ಯವಾಗಿದೆ ಎಂದೂ ಮೋದಿ ತಿಳಿಸಿದ್ದಾರೆ. ಕಳೆದ ಹತ್ತು ವರ್ಷಗಳಲ್ಲಿ ನಮ್ಮ ಸೌರ ವಿದ್ಯುತ್ ಸಾಮರ್ಥ್ಯ 32 ಪಟ್ಟು ಹೆಚ್ಚಾಗಿದೆ. ಇದೇ ವೇಗ ಹಾಗೂ ಪ್ರಮಾಣದ ಕಾರಣದಿಂದ 2030ರ ವೇಳೆಗೆ 500 ಜಿ. ಡಬ್ಲ್ಯೂ. ನವೀಕರಣ ಇಂಧನ ಹೊಂದುವ ಗುರಿ ಸಾಧ್ಯವಾಗಲಿದೆ ಎಂದವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸೌರ ಹಸಿರು ಇಂಧನ ವಲಯದ ಹೂಡಿಕೆಯಲ್ಲಿರುವ ಅಸಮತೋಲನ ನಿವಾರಿಸುವ ಅಗತ್ಯವಿದೆ. ಉತ್ಪಾದನೆ ಹಾಗೂ ತಂತ್ರಜ್ಞಾನವನ್ನು ಪ್ರಜಾಸತ್ತಾತ್ಮಕ ಮಾಡುವುದರಿಂದ ಅಭಿವೃದ್ಧಿ ಹೊಂದುವ ದೇಶಗಳಿಗೆ ನೆರವಾಗುತ್ತದೆ. ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳು ಹಾಗೂ ಸಣ್ಣ ದ್ವೀಪ ದೇಶಗಳ ಅಭಿವೃದ್ಧಿಗೆ ಉನ್ನತ ಆದ್ಯತೆ ಆಗಬೇಕಿದೆ ಎಂದು ಪ್ರಧಾನಿ ಹೇಳಿದರು.

ಅಂತರರಾಷ್ಟ್ರೀಯ ಸೌರ ಒಕ್ಕೂಟದ ವತಿಯಿಂದ ಆಯೋಜಿಸಲಾಗಿರುವ ಎರಡು ದಿನಗಳ ಅಂತರರಾಷ್ಟ್ರೀಯ ಸೌರ ಉತ್ಸವ ಗುರುವಾರ ಆರಂಭವಾಗಿದೆ.

## ನಗರದಲ್ಲಿ ನಾಳೆ ಹಿರಿಯ ನಾಗರಿಕರಿಗೆ ಕ್ರೀಡಾ - ಸಾಂಸ್ಕೃತಿಕ ಸ್ಪರ್ಧೆ

ದಾವಣಗೆರೆ, ಸೆ.6- ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ನಾಡಿದ್ದು ದಿನಾಂಕ 8 ರ ಭಾನುವಾರ ಬೆಳಿಗ್ಗೆ 10.30ಕ್ಕೆ ನಗರದ ಬಾಪೂಜಿ ಸ್ಕೂಲ್ ಮೈದಾನ ಎಂ.ಸಿ.ಸಿ.'ಬಿ' ಬ್ಲಾಕ್‌ನಲ್ಲಿ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರೆಣ್ಣನವರ ಉದ್ಘಾಟಿಸುವರು. ಜಿಲ್ಲಾ ಹಿರಿಯ ನಾಗರಿಕರ ಸಂಘದ ಗೌರವ ಕಾರ್ಯದರ್ಶಿ ಹಾಗೂ ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘದ ಉಪಾಧ್ಯಕ್ಷರಾದ ಎಸ್. ಗುರುಮೂರ್ತಿ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಾನಾಯ್ಕ. ಕೆ.ಎಸ್, ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣಕುಮಾರ್, ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಭರತ್ ರಾಜ್.ಕೆ.ಜಿ, ಪೊಲೀಸ್ ನಿವೃತ್ತ ನೌಕರರ ಸಂಘದ ಕಾರ್ಯದರ್ಶಿ ರಾಜಣ್ಣ ಭಾಗವಹಿಸುವರು.

## ಶ್ರೀ ಶಾರದಾಂಬ ದೇವಸ್ಥಾನಕ್ಕೆ ಪಾಲಿಕೆ ಸದಸ್ಯರ ಭೇಟಿ, ಸನ್ಮಾನ



ದಾವಣಗೆರೆ, ಸೆ. 6 - ನಗರದ ಎಸ್. ನಿಜಲಿಂಗಪ್ಪ ಬಡಾವಣೆಯ ವರ್ತುಲ ರಸ್ತೆಯಲ್ಲಿರುವ ಶ್ರೀ ಶಾರದಾಂಬ ದೇವಸ್ಥಾನಕ್ಕೆ 23ನೇ ವಾರ್ಡಿನ ಪಾಲಿಕೆ ಸದಸ್ಯರಾದ ಶ್ರೀಮತಿ ರೇಖಾ ಸುರೇಶ್ ಗಂಡಗಾಳೆ, ಸುರೇಶ್ ಗಂಡಗಾಳೆ ಮತ್ತು 31ನೇ ವಾರ್ಡಿನ ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್ ಅವರು ದೇವಸ್ಥಾನಕ್ಕೆ ಭೇಟಿ ನೀಡಿದ್ದರು.

ಈ ಸಂದರ್ಭದಲ್ಲಿ ಶ್ರೀ ಶಂಕರ ಸೇವಾ ಸಂಘದಿಂದ ಅಧ್ಯಕ್ಷ ಡಾ. ಬಿ.ಟಿ ಅಚ್ಚುತ್ ಅವರು ಇಬ್ಬರನ್ನು ಸನ್ಮಾನಿಸಿ, ಗೌರವಿಸಿದರು.

ಶ್ರೀ ಶಂಕರ ಸೇವಾ ಸಂಘದ ಕಾರ್ಯದರ್ಶಿ ಶ್ರೀನಿವಾಸ್ ಜೋಷಿ, ಉಪಾಧ್ಯಕ್ಷರುಗಳಾದ ಮೋತಿ ಸುಬ್ರಮಣ್ಯ, ಗಿರೀಶ್ ನಾಡಿಗ್, ಖಜಾಂಚಿ ಶ್ರೀ ವಿನಾಯಕ ಜೋಶಿ, ಸದಸ್ಯ ಬಾಲಕೃಷ್ಣ ವೈದ್ಯ ಮತ್ತಿತರರು ಉಪಸ್ಥಿತರಿದ್ದರು.

## ಕೀನ್ಯಾ ಶಾಲೆಯಲ್ಲಿ ಬೆಂಕಿ : 17 ಮಕ್ಕಳ ಸಾವು

ನೈರೋಬಿ, ಸೆ. 6 - ಕೀನ್ಯಾದ ವಸತಿ ಶಾಲೆಯಲ್ಲಿ ಬೆಂಕಿ ಕಾಣಿಸಿಕೊಂಡು 17 ವಿದ್ಯಾರ್ಥಿಗಳು ಸಾವನ್ನಪ್ಪಿದ್ದಾರೆ ಹಾಗೂ 13 ವಿದ್ಯಾರ್ಥಿಗಳು ತೀವ್ರವಾಗಿ ಗಾಯಗೊಂಡಿದ್ದಾರೆ. ಮೃತರ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಕಳವಳ ಇದೆ.

ನ್ಯೇರಿ ಎಂಬಲ್ಲಿನ ಪ್ರಾಥಮಿಕ ಶಾಲೆಯಲ್ಲಿ ಈ ಅವಘಡ ನಡೆದಿದೆ. ಕೀನ್ಯಾದ ವಸತಿ ಶಾಲೆಗಳಲ್ಲಿ ಬೆಂಕಿ ಅವಘಡ ಸಾಮಾನ್ಯವಾಗಿದೆ.

ಮಕ್ಕಳ ವ್ಯಾಸಂಗಕ್ಕೆ ಹೆಚ್ಚು ಸಮಯ ಸಿಗಲಿ ಎಂದು ಪೋಷಕರು ಮಕ್ಕಳನ್ನು ಶಾಲೆಯಲ್ಲಿ ಬಿಡುತ್ತಿದ್ದಾರೆ.

## ನಗರದ ವಾಸವಿ ಯುವಜನ ಸಂಘದಿಂದ ಗಣೇಶೋತ್ಸವ

**ಶಿವಪಾರ್ವತಿ ಕಲ್ಯಾಣೋತ್ಸವದ ಲೇಸರ್ ಶೋ ಪ್ರದರ್ಶನ**

ಎಸ್.ಕೆ.ಪಿ.ದೇವಸ್ಥಾನ ರಸ್ತೆಯಲ್ಲಿರುವ ವಾಸವಿ ಯುವಜನ ಸಂಘದಿಂದ 43ನೇ ವಿನಾಯಕ ಮಹೋತ್ಸವದ ಪ್ರಯುಕ್ತ ಲೇಸರ್ ಶೋ ಮೂಲಕ ಶಿವ ಪಾರ್ವತಿ ಕಲ್ಯಾಣೋತ್ಸವ ಪ್ರದರ್ಶನ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಎಸ್. ಸುನೀಲ್ ತಿಳಿಸಿದ್ದಾರೆ.

ಇಂದು ಮಧ್ಯಾಹ್ನ 12.30ಕ್ಕೆ ಶ್ರೀ ಸ್ವಾಮಿಯ ಪ್ರತಿಷ್ಠಾಪನೆ ನಡೆಯಲಿದೆ. ನಾಳೆ ದಿನಾಂಕ 8ರ ಭಾನುವಾರದಿಂದ 14ರ ಶನಿವಾರದವರೆಗೆ ಶಿವ ಪಾರ್ವತಿ ಕಲ್ಯಾಣೋತ್ಸವದ ಲೇಸರ್ ಶೋ ಪ್ರದರ್ಶನ ಎಸ್.ಕೆ.ಪಿ. ರಸ್ತೆಯಲ್ಲಿರುವ ಶ್ರೀ ಕಾಸಲ್ ವಿಠ್ಠಲ್ ಶ್ರೀಮತಿ ಸುನಂದಮ್ಮ ಕಲ್ಯಾಣ ಮಂಟಪದಲ್ಲಿ ಸಂಜೆ 6 ರಿಂದ 9 ರವರೆಗೆ ನಡೆಯಲಿದೆ ಎಂದು ತಿಳಿಸಿದರು.

ದಿನಾಂಕ 10ರ ಮಂಗಳವಾರ ಬೆಳಿಗ್ಗೆ 10 ರಿಂದ ಶ್ರೀ ಗಣಪತಿ ಹೋಮ, ದಿನಾಂಕ 12ರ ಗುರುವಾರ ಬೆಳಿಗ್ಗೆ 10.30 ರಿಂದ ಧನ್ವಂತರಿ ಹೋಮ, ದಿನಾಂಕ 13ರ ಶುಕ್ರವಾರ ಬೆಳಿಗ್ಗೆ 10 ರಿಂದ ದ್ವೈಮಾತುರ ಶಿವತನ ಪೂಜೆ (8 ಬಗೆಯ ವಿವಿಧ ದ್ರವ್ಯಗಳಿಂದ), ದಿನಾಂಕ 14ರ ಶನಿವಾರ ಬೆಳಿಗ್ಗೆ 10.30 ರಿಂದ ಶ್ರೀ ನಗರೇಶ್ವರ ಸ್ವಾಮಿಗೆ ಏಕಾದಶ ರುದ್ರಾಭಿಷೇಕ ನಂತರ ಮಹಾ ಮೃತ್ಯುಂಜಯ ಹೋಮ ನಡೆಯಲಿದ್ದು, ದಿನಾಂಕ 15ರ ಭಾನುವಾರ ಸಂಜೆ ಶ್ರೀ ವಿನಾಯಕ ವಿಸರ್ಜನೆ ನಡೆಯಲಿದೆ ಎಂದು ಕಾರ್ಯದರ್ಶಿ ಆರ್.ಎನ್.ಅಜಿತ್ ತಿಳಿಸಿದ್ದಾರೆ.

## ಕುರಿ, ಕೋಳಿ ಸಾಕಾಣಿಕೆ ತರಬೇತಿ

ದಾವಣಗೆರೆ, ಸೆ.6- ನಗರದ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇದೇ ದಿನಾಂಕ 9 ಮತ್ತು 10 ರಂದು ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ನಡೆಯಲಿದೆ. ವಿವರಕ್ಕೆ 08192-233787.

# ಮಲೇಬೆನ್ನೂರಿನ ನಾಡ ಕಚೇರಿ, ಆರೋಗ್ಯ ಕೇಂದ್ರಕ್ಕೆ ಎಸಿ ಸಂತೋಷ್ ದಿಢೀರ್ ಭೇಟಿ





ಮಲೇಬೆನ್ನೂರು, ಸೆ.6- ಪಟ್ಟಣದ ನಾಡಕಚೇರಿಗೆ ಶುಕ್ರವಾರ ಭೇಟಿ ನೀಡಿದ ಉಪವಿಭಾಗಾಧಿಕಾರಿ ಸಂತೋಷ್ ಕುಮಾರ್ ಅವರು, ಸಕಾಲ ಕಡತಗಳ ವಿಲೇವಾರಿ ಹಾಗೂ ಕಂದಾಯ ವಿಷಯಗಳ ಬಗ್ಗೆ ಪರಿಶೀಲನೆ ನಡೆಸಿ, ಮೆಚ್ಚುಗೆ ವ್ಯಕ್ತಪಡಿಸಿದರು.

ನಂತರ ಮತದಾರರ ಪಟ್ಟಿ ಸಮೀಕ್ಷೆ ಪ್ರಗತಿ ಕುರಿತು ಬಿಎಲ್‌ಓಗಳ ಜೊತೆ ಚರ್ಚಿಸಿದ ಎಸಿ ಅವರು, ಕಡಿಮೆ ಪ್ರಗತಿ ಮಾಡಿದ ಬಿಎಲ್‌ಓಗಳಿಗೆ ಹಾಗೂ ಸಂಬಂಧಿಸಿದ ಮೇಲ್ವಿಚಾರಕರಾದ ಗ್ರಾಮಲೆಕ್ಕಾಧಿಕಾರಿಗಳಿಗೆ 3-4 ದಿನದೊಳಗೆ ಹೆಚ್ಚಿನ ಪ್ರಗತಿ ಸಾಧಿಸುವಂತೆ ಖಡಕ್ ಸೂಚನೆ ನೀಡಿದರು.

**ಸ್ಥಳ ಪರಿಶೀಲನೆ :** ಚಿಕ್ಕ ತಮ್ಮನಹಳ್ಳಿ ಸರ್ವೆ ನಂ ಜಮೀನಿನಲ್ಲಿ ಕಳೆದ ವರ್ಷದ ಬೆಳೆ ಹಾನಿ ಬಗ್ಗೆ ಎಸಿ ಸಂತೋಷ್ ಅವರು, ಖುದ್ದು ಸ್ಥಳ ಪರಿಶೀಲನೆ ನಡೆಸಿದರು.

**ಆರೋಗ್ಯ ಕೇಂದ್ರಕ್ಕೆ ಭೇಟಿ :** ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಿಢೀರ್ ಭೇಟಿ ನೀಡಿದ ಎಸಿ ಅವರು, ಸ್ವಚ್ಛತೆ ಕಾಪಾಡುವಂತೆ ಮತ್ತು ಆರೋಗ್ಯ ಕೇಂದ್ರದ ಆವರಣದಲ್ಲಿ ಪಾರ್ಕಿಂಗ್ ವ್ಯವಸ್ಥೆ ಸರಿಪಡಿಸುವಂತೆ ಡಾ. ಪ್ರಶಾಂತ್, ಡಾ. ನಿಸಾರ್ ಹಾಗೂ ಪಿಎಸ್ಐ ಪ್ರಭು ಅವರಿಗೆ ಸೂಚಿಸಿದರು.

ಉಪತಹಶೀಲ್ದಾರ್ ಆರ್.ರವಿ, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಅಣ್ಣಪ್ಪ, ಶರೀಫ ಹಾಗೂ ಗ್ರಾಮ ಸಹಾಯಕರು ಉಪ ವಿಭಾಗಾಧಿಕಾರಿಗಳ ವರ ಜೊತೆಗಿದ್ದರು.

**ಪುರಸಭೆ ಸದಸ್ಯರ ಭೇಟಿ :** ನಾಡ ಕಚೇರಿಯಲ್ಲಿ ಎಸಿ ಸಂತೋಷ್ ಕುಮಾರ್ ಅವರನ್ನು ಭೇಟಿ ಮಾಡಿದ ಪುರಸಭೆ ಸದಸ್ಯರಾದ ಬಿ.ಮಂಜುನಾಥ್, ಷಾ ಅಬ್ರಾರ್, ಎ.ಆರೀಫ್ ಅಲಿ, ಭಾನುವಳ್ಳಿ ಸುರೇಶ್, ಚಮನ್ ಷಾ ಅವರು, ಪುರಸಭೆ ಉಪಾಧ್ಯಕ್ಷರಿಗೆ ಪ್ರಭಾರಿ ಅಧ್ಯಕ್ಷರನ್ನಾಗಿ ಮಾಡುವ ಬಗ್ಗೆ ಮತ್ತು ಪುರಸಭೆಯ ಸಾಮಾನ್ಯ ಸಭೆ ಕರೆಯುವ ಬಗ್ಗೆ ಚರ್ಚಿಸಿದರು.

ಇದಕ್ಕೆ ಉತ್ತರಿಸಿದ ಎಸಿ ಸಂತೋಷ್ ಅವರು, ಈ ಬಗ್ಗೆ ಹಿರಿಯ ಅಧಿಕಾರಿಗಳ ಜೊತೆ ಚರ್ಚಿಸಿ, ತಿಳಿಸುವುದಾಗಿ ಹೇಳಿದರು.


**ಐದನೇ ವರ್ಷದ ಪುಣ್ಯಸ್ಮರಣೆ**



**ದಿ|| ಪಿ.ಕೆ. ಬಸವರಾಜಪ್ಪನವರು**

(ಕೃಷಿ ಮಾರುಕಟ್ಟೆ ನಿವೃತ್ತ ಅಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದಾವಣಗೆರೆ)

*ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು.*
*ಸದಾ ನಿಮ್ಮ ಸ್ಮರಣೆಯಲ್ಲಿರುವ ಮತ್ತು ನೀವು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ.*

ಇಂತಿ ದುಃಖತಪ್ತರು :

**ಶ್ರೀಮತಿ ಯಶೋಧಮ್ಮ ಮತ್ತು ಮಕ್ಕಳು**

ಕಬ್ಬೂರು. ಮೊ : 99011 22899


## ನಗರಸಭೆ ನಿಗದಿಪಡಿಸಿದ ಸ್ಥಳಗಳಲ್ಲಿ ಗಣಪತಿ ವಿಸರ್ಜಿಸಲು ಸೂಚನೆ



ಹರಿಹರ, ಸೆ.6- ಇಲ್ಲಿನ ನಗರಸಭೆ ವ್ಯಾಪ್ತಿಯ 31 ವಾರ್ಡ್‌ಗಳಲ್ಲಿ ಗಣೇಶ ಪ್ರತಿಷ್ಠಾಪನೆ ಮಾಡುವವರು ಗಣೇಶ ಹಬ್ಬದ ನಂತರ ಗಣೇಶ ಮೂರ್ತಿಗಳನ್ನು ತುಂಗಭದ್ರಾ ನದಿಗೆ ವಿಸರ್ಜಿಸದೇ, ನಗರಸಭೆಯು ನಿಗದಿಪಡಿಸಿರುವ ಸ್ಥಳ ನೀರು ಸರಬರಾಜು ಘಟಕದಲ್ಲಿನ ನೀರಿನ ತೊಟ್ಟಿಗಳಲ್ಲಿ ಗಣೇಶ ವಿಸರ್ಜನೆ ಮಾಡಲು ಅನುಕೂಲ ಮಾಡಲಾಗಿದೆ.

ಒಂದರಿಂದ 18 ಅಡಿಯವರೆಗೆ ಗಣೇಶ ಮೂರ್ತಿಗಳನ್ನು ವಿಸರ್ಜಿಸಲು ವ್ಯವಸ್ಥೆ ಮಾಡಲಾಗಿದೆ. ಗಣೇಶ ಹಬ್ಬದ ಸಂಘಟಕರು ನಗರಸಭೆ ನಿಗದಿಪಡಿಸಿರುವ ಸ್ಥಳದಲ್ಲಿ ಗಣೇಶ ವಿಸರ್ಜನೆ ಮಾಡಲು ತಿಳಿಸಲಾಗಿದ್ದು, ಸಾರ್ವಜನಿಕರು ಮತ್ತು ಗಣೇಶ ಕಮಿಟಿಗಳ ಸಂಘಟಕರು ತುಂಗಭದ್ರಾ ನದಿಯನ್ನು ಮಲಿನ ಮಾಡದಂತೆ ನಗರಸಭೆ ವ್ಯಾಪ್ತಿಯಲ್ಲಿನ ಎಲ್ಲಾ ಗಣೇಶ ಮೂರ್ತಿಗಳನ್ನು ನೀರು ಸರಬರಾಜು ಘಟಕದ ಟ್ಯಾಂಕ್‌ಗಳಲ್ಲಿ, ನಿಗದಿತ ಸ್ಥಳಗಳಲ್ಲಿ ಗಣಪತಿ ಮೂರ್ತಿಗಳನ್ನು ವಿಸರ್ಜಿಸುವಂತೆ ನಗರಸಭೆ ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಸೂಚಿಸಿದ್ದಾರೆ.

ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ರವಿಪ್ರಕಾಶ್, ಸಂತೋಷ್ ಹಾಗೂ ಇತರರು ಹಾಜರಿದ್ದರು.

## ರಾಷ್ಟ್ರೀಯ ತೋಟಗಾರಿಕೆ ಇಲಾಖೆಯಿಂದ ಸಹಾಯಧನಕ್ಕೆ ಅರ್ಜಿ

ದಾವಣಗೆರೆ, ಸೆ. 6 - ರಾಷ್ಟ್ರೀಯ ತೋಟಗಾರಿಕೆ ಇಲಾಖೆ ವತಿಯಿಂದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ವಿವಿಧ ಸಹಾಯ ಧನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

**ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ:** ಅಡಿಕೆ, ಕಾಳುಮೆಣಸು, ಕೋಕೋ ಮುಂತಾದ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿರುವ ಪರಿಶಿಷ್ಟ ಜಾತಿಯ ಅರ್ಹ ರೈತರಿಗೆ ಪ್ರಾಥಮಿಕ ಸಂಸ್ಕರಣಾ ಘಟಕ ಸ್ಥಾಪಿಸಲು ಸಹಾಯಧನ ನೀಡಲಾಗುತ್ತದೆ.

**ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ :** ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಸಿಕೊಳ್ಳಲು ಶೇಕಡಾ 90ರಷ್ಟು ಸಹಾಯಧನ (2 ಹೆಕ್ಟೇರ್‌ರವರೆಗೆ ಶೇಕಡಾ 90) ಸಹಾಯಧನ. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಸಣ್ಣ, ಅತಿಸಣ್ಣ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ರೈತರಿಗೆ ಅಡಿಕೆ ಹೊರತುಪಡಿಸಿ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಕೈಗೊಳ್ಳಲು ಅವಕಾಶವಿದೆ.

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಲ್ಲಿ ಪರಿಶಿಷ್ಟ ಜಾತಿಯ ಅರ್ಹ ತೋಟಗಾರಿಕೆ ಬೆಳೆ ಹೊಂದಿರುವ ರೈತರಿಗೆ 9000 ಸಿಎಂಟಿ ಸಾಮರ್ಥ್ಯದ ನೀರು ಸಂಗ್ರಹಣಾ ಘಟಕ ನಿರ್ಮಾಣಕ್ಕೆ ಸಹಾಯಧನ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ದಾವಣಗೆರೆ ಕಸಬಾ ಮೊ.ನಂ 9686334350, ಆನಗೋಡು ರೈತ ಸಂಪರ್ಕ ಕೇಂದ್ರ 7019 819101, ಮಾಯಕೊಂಡ ರೈತ ಸಂಪರ್ಕ ಕೇಂದ್ರ ಮಾಯಕೊಂಡ ಮೊ. ನಂ. 63646 42155. 8722551293 ಅಥವಾ ದಾವಣಗೆರೆಯಲ್ಲಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಲು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.



## ಬಿಜೆಪಿ ಸೇರಿದ ಕ್ರಿಕೆಟಿಗ ಜಡೇಜಾ

ಜಾಮ್ನಗರ, ಸೆ. 6 - ಕ್ರಿಕೆಟಿಗ ರವೀಂದ್ರ ಜಡೇಜಾ ಅವರು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಪಕ್ಷ ಪ್ರಸಕ್ತ ನಡೆಸುತ್ತಿರುವ ಸದಸ್ಯತ್ವ ಅಭಿಯಾನದ ವೇಳೆ ಅವರು ಬಿಜೆಪಿಗೆ ಸೇರಿದ್ದಾರೆ. ಜಡೇಜಾ ಅವರ ಪತ್ನಿ ಹಾಗೂ ಶಾಸಕಿ ರವಿಬಾ ಜಡೇಜಾ ಅವರು ಈ ಮಾಹಿತಿ ನೀಡಿದ್ದು, ಜಡೇಜಾ ಸದಸ್ಯತ್ವ ಪಡೆಯುವ ಚಿತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. ಜಡೇಜಾ ಅವರು ಟಿ20 ಅಂತರ ರಾಷ್ಟ್ರೀಯ ಪಂದ್ಯಗಳಿಂದ ನಿವೃತ್ತಿ ಪಡೆದಿದ್ದಾರೆ.

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಸೆಪ್ಟೆಂಬರ್ 07, 2024



ಚಿತ್ರ : ಜಿಗಳಿ ಪ್ರಕಾಶ್

## ಕೊಮಾರನಹಳ್ಳಿ ಕೆರೆಯಲ್ಲಿ ನೀರಿನ ಮಟ್ಟ ಮತ್ತಷ್ಟು ಏರಿಕೆ

ಮಲೇಬೆನ್ನೂರು, ಸೆ.6- ಕೊಮಾರನಹಳ್ಳಿಯ ಹೆಳವನಕಟ್ಟೆ ಲಕ್ಷ್ಮೀ ರಂಗನಾಥ ಸ್ವಾಮಿಯ 97 ಎಕರೆ ವಿಸ್ತೀರ್ಣದ ಐತಿಹಾಸಿಕ ಕೆರೆ ಭರ್ತಿಯಾಗುವತ್ತ ಹೆಜ್ಜೆ ಇಟ್ಟಿದೆ. ಮಳೆ ನೀರಿನ ಜೊತೆಗೆ ಭದ್ರಾ ನಾಲೆಯ ನೀರನ್ನೂ ಪಂಪ್‌ಸೆಟ್‌ಗಳ ಮೂಲಕ ಕೆರೆಗೆ ಹರಿಸುತ್ತಿರುವುದರಿಂದ ಕೆರೆಯಲ್ಲಿ ನೀರಿನ ಮಟ್ಟ ಗಣನೀಯವಾಗಿ ಏರಿಕೆ ಆಗುತ್ತಿದ್ದು, ಈ ತಿಂಗಳೊಳಗೆ ಕೆರೆ ಭರ್ತಿಯಾಗಿ ಕೋಡಿ ಬೀಳುವ ಸಾಧ್ಯತೆ ಇದೆ ಎನ್ನಲಾಗಿದೆ. ಜೊತೆಗೆ ಸದ್ಯದಲ್ಲೇ ಕಮ್ಮಾರಗಟ್ಟೆ ಜಾಕ್‌ವೆಲ್‌ನಿಂದ (4ನೇ ಪುಟಕ್ಕೆ)

# 4 ಬೆಳೆಗಳು ಬೆಂಬಲ ಬೆಲೆಯಲ್ಲಿ ಖರೀದಿ

**ಹೆಸರುಕಾಳು, ಸೂರ್ಯಕಾಂತಿ, ಸೋಯಾಬಿನ್ ಮತ್ತು ಉದ್ದಿನಕಾಳು ಮೊದಲ ಬಾರಿಗೆ ಖರೀದಿ : ಸಚಿವ ಶಿವಾನಂದ ಪಾಟೀಲ್**

ಬೆಂಗಳೂರು, ಸೆ. 6 - ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಏಕಕಾಲದಲ್ಲಿ ನಾಲ್ಕು ಬೆಳೆಗಳನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿ ಮಾಡಲಾಗುತ್ತಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಇಂದಿಲ್ಲಿ ತಿಳಿಸಿದ್ದಾರೆ.

ಎಪಿಎಂಸಿ ಕಾಯ್ದೆ ಮರುಸ್ಥಾಪನೆಯಿಂದ ರೈತರಿಗೆ ಹೆಚ್ಚು ಅನುಕೂಲವಾಗಿದ್ದು ಇದರಿಂದ ಏಕಕಾಲಕ್ಕೆ ನಾಲ್ಕು ಬೆಳೆಗಳ ಖರೀದಿಗೆ ಸಹಕಾರಿಯಾಗಿದೆ. ಸೋಯಾಬೀನ್ ಮತ್ತು ಉದ್ದಿನಕಾಳು ಖರೀದಿ ಪ್ರಕ್ರಿಯೆ ಆರಂಭಿಸಲು ಆದೇಶ ಹೊರಡಿಸಲಾಗಿದೆ.

ಈಗಾಗಲೇ ಹೆಸರುಕಾಳು ಮತ್ತು ಸೂರ್ಯಕಾಂತಿಯನ್ನು ಬೆಂಬಲ ಬೆಲೆಯಲ್ಲಿ ಖರೀದಿ ಮಾಡಲು ರಾಜ್ಯ ಸರ್ಕಾರ ಖರೀದಿ ಸಂಸ್ಥೆಗಳನ್ನು ನೇಮಕ ಮಾಡಿದೆ. ಪ್ರತಿ ರೈತರಿಂದ ಗರಿಷ್ಠ 15 ಕ್ವಿಂಟಲ್ ಸೂರ್ಯಕಾಂತಿ ಮತ್ತು 10 ಕ್ವಿಂಟಲ್ ಹೆಸರುಕಾಳು ಖರೀದಿ ಮಾಡಲಿದೆ.

ಎಫ್.ಎ.ಕ್ಯೂ ಗುಣಮಟ್ಟದ ಸೋಯಾಬೀನ್ ಕ್ವಿಂಟಾಲ್‌ಗೆ 4,892 ರೂ. ಹಾಗೂ ಉದ್ದಿನ ಕಾಳಿಗೆ ಕ್ವಿಂಟಾಲ್‌ಗೆ 7,400 ರೂ. ಬೆಂಬಲ ಬೆಲೆ ನಿಗದಿಪಡಿಸಲಾಗಿದೆ, ಬೆಂಬಲ ಬೆಲೆಯಲ್ಲಿ ಸುಮಾರು 10 ಲಕ್ಷ ಕ್ವಿಂಟಾಲ್ ಸೋಯಾಬೀನ್ ಮತ್ತು 2 ಲಕ್ಷ ಕ್ವಿಂಟಾಲ್ ಉದ್ದಿನಕಾಳು ಖರೀದಿ ಮಾಡಲಾಗುವುದು.

2024-25ನೇ ಸಾಲಿನಲ್ಲಿ 4.10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 4.72 ಲಕ್ಷ ಮೆಟ್ರಿಕ್ ಟನ್ ಸೋಯಾಬೀನ್ ಹಾಗೂ 0.77 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 0.40 ಲಕ್ಷ ಮೆಟ್ರಿಕ್ ಟನ್ ಉದ್ದಿನಕಾಳು ಇಳುವರಿ ನಿರೀಕ್ಷೆ ಮಾಡಲಾಗಿತ್ತು.

ಎಫ್.ಎ.ಕ್ಯೂ ಗುಣಮಟ್ಟದ ಹೆಸರುಕಾಳಿಗೆ ಪ್ರತಿ ಕ್ವಿಂಟಾಲ್‌ಗೆ 8,682 ರೂ. ಹಾಗೂ ಸೂರ್ಯಕಾಂತಿಗೆ ಕ್ವಿಂಟಾಲ್‌ಗೆ 7,280 ರೂ. ನಿಗದಿಪಡಿಸಲಾಗಿದೆ.

ಹೆಸರುಕಾಳು ಖರೀದಿಗೆ 172 ಖರೀದಿ ಕೇಂದ್ರ ಗುರುತಿಸಲಾಗಿದೆ, 1982 ರೈತರು ನೋಂದಣಿ ಮಾಡಿಸಿಕೊಂಡಿದ್ದು, ಸೂರ್ಯಕಾಂತಿ ಖರೀದಿಗೆ 19 ಖರೀದಿ ಕೇಂದ್ರಗಳನ್ನು ಗುರುತಿಸಲಾಗಿದೆ, 461 ರೈತರು ನೋಂದಣಿ ಮಾಡಿಸಿಕೊಂಡಿದ್ದಾರೆ.

ಕೊಬ್ಬರಿ ಖರೀದಿಯಲ್ಲೂ ಈ ಬಾರಿ ಪ್ರಮುಖ ಪಾತ್ರ ವಹಿಸಲಾಗಿದ್ದು, ಇದೇ ಮೊದಲ ಬಾರಿಗೆ ಮಿಲ್ಲಿಂಗ್ ಕೊಬ್ಬರಿಯನ್ನು ಬೆಂಬಲ ಬೆಲೆಯಲ್ಲಿ ಖರೀದಿ ಮಾಡಲಾಗಿದೆ.

ಎಪಿಎಂಸಿ ಯಾರ್ಡ್‌ಗಳಲ್ಲಿ 150 ಕೋಟಿ ರೂ. ವೆಚ್ಚದಲ್ಲಿ 14ರಿಂದ 15 ಶೀತಲ ಗೃಹಗಳನ್ನು ನಿರ್ಮಾಣ ಮಾಡಲಾಗುವುದು. ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ವಿಭಾಗಾವಾರು ವಿಜಿಲೆನ್ಸ್ ಸೆಲ್‌ಗಳನ್ನು ರಚಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ವಿಜಿಲೆನ್ಸ್ ರಚನೆ ಪರಿಣಾಮ ಎಪಿಎಂಸಿ ಆದಾಯ ಹೆಚ್ಚಾಗಿದೆ. ಈ ವರ್ಷ 380 ರೂ.ನಿಂದ 400 ಕೋಟಿ ರೂ. ಆದಾಯ ನಿರೀಕ್ಷೆ ಮಾಡಲಾಗಿದೆ. ಆರ್ಥಿಕ ವರ್ಷದ ಮೊದಲ 5 ತಿಂಗಳಲ್ಲಿ 133.15 ಕೋಟಿ ರೂ. ಆದಾಯ ಸಂಗ್ರಹವಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 77.42 ಕೋಟಿ ರೂ. ಆದಾಯ ಸಂಗ್ರಹವಾಗಿತ್ತು ಎಂದರು.

ರಾಜ್ಯ ಸರ್ಕಾರ ವಿದ್ಯುತ್ ಮಗ್ಗ ಮತ್ತು ಮಗ್ಗ ಪೂರ್ವ ಘಟಕಗಳ ವಿದ್ಯುತ್ ಸಬ್ಸಿಡಿ ಮಿತಿ ರದ್ದುಪಡಿಸಿದ್ದು, ಇದರಿಂದ ಪ್ರತಿ ನೇಕಾರರಿಗೆ ವಾರ್ಷಿಕ ಕನಿಷ್ಠ 40,000 ರೂ. ಉಳಿತಾಯ ವಾಗಲಿದೆ. 10.1 ಎಚ್‌ಪಿರಿಂದ 20 ವರೆಗಿನ (4ನೇ ಪುಟಕ್ಕೆ)

## ಜಿಎಸ್‌ಟಿ : ಆರೋಗ್ಯ ವಿಮಾ ಕಂತಿನ ತೆರಿಗೆ ರದ್ದುಗೊಳಿಸಲು ಸಲಹೆ

ಬೆಂಗಳೂರು, ಸೆ. 6 - ಬರುವ ಜಿ.ಎಸ್.ಟಿ. ಮಂಡಳಿ ಸಭೆಯಲ್ಲಿ ಆರೋಗ್ಯ ವಿಮೆ ಕಂತಿನ ಮೇಲಿನ ಶೇ. 18ರ ತೆರಿಗೆ ರದ್ದುಗೊಳಿಸುವಂತೆ ಸಲಹೆ ನೀಡಬೇಕೆಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಕರ್ನಾಟಕ ಸರ್ಕಾರ ಒತ್ತಾಯಿಸಿದೆ.

ಆರೋಗ್ಯದ ಖಾತರಿ ಒದಗಿಸುವುದು ಪ್ರತಿಯೊಂದು ಚುನಾಯಿತ ಸರ್ಕಾರದ ಕರ್ತವ್ಯವಾಗಿದೆ. ಆರೋಗ್ಯ ವಿಮೆ ಮೇಲೆ ಶೇ. 18ರ ತೆರಿಗೆ ವಿಧಿಸುವುದರಿಂದ ಜನಸಾಮಾನ್ಯರು (4ನೇ ಪುಟಕ್ಕೆ)

## ತತ್ಕಾಲ್ ತ್ವರಿತಗೊಳಿಸುವ ತಂತ್ರಾಂಶದಲ್ಲಿ ತಪ್ಪಿಲ್ಲ

ಬೆಂಗಳೂರು, ಸೆ. 6 - ತ್ವರಿತವಾಗಿ ತತ್ಕಾಲ್ ಟಿಕೆಟ್ ಬುಕಿಂಗ್ ಮಾಡುವ ತಂತ್ರಾಂಶ ರೂಪಿಸಿದ್ದ ಐಐಟಿ ಪದವೀಧರ ಹಾಗೂ ನವೋದ್ಯಮಿ ವಿರುದ್ಧದ ಕ್ರಿಮಿನಲ್ ಮೊಕದ್ದಮೆಯನ್ನು ಕರ್ನಾಟಕ ಹೈಕೋರ್ಟ್ ರದ್ದುಗೊಳಿಸಿದೆ.

ನವೋದ್ಯಮಿ ಗೌರವ್ ಥಾಕೆ ಅವರು ತತ್ಕಾಲ್ ಟಿಕೆಟ್ ಅನ್ನು ತ್ವರಿತವಾಗಿ ಬುಕ್ ಮಾಡುವ ಸಾಫ್ಟ್‌ವೇರ್ ರೂಪಿಸಿದ್ದರು. ಆದರೆ ಇದು ರೈಲ್ವೆ ಕಾಯ್ದೆಯ 143ನೇ ಸೆಕ್ಷನ್ ಉಲ್ಲಂಘನೆ ಎಂದು ಪ್ರಕರಣ (4ನೇ ಪುಟಕ್ಕೆ)

# ಹೊನ್ನಾಳಿ ಪುರಸಭೆ ಅಧ್ಯಕ್ಷರಾಗಿ ಮೈಲಪ್ಪ ಉಪಾಧ್ಯಕ್ಷರಾಗಿ ಸಾವಿತ್ರಮ್ಮ ವಿಜಯೇಂದ್ರಪ್ಪ



**ಬಿಜೆಪಿಯಲ್ಲಿ ಮೂಡದ ಒಮ್ಮತ ಲಾಭ ಪಡೆದ ಕಾಂಗ್ರೆಸ್**

ಹೊನ್ನಾಳಿ, ಸೆ. 6 - ಪುರಸಭೆ ಎಸ್ಸಿ ಮೀಸಲಾತಿಯ ಅಧ್ಯಕ್ಷ ಸ್ಥಾನಕ್ಕೆ ಒಬ್ಬರೆ ಸದಸ್ಯರಿದ್ದ ಕಾರಣ 1ನೇ ವಾರ್ಡಿನ ತುಂಗಭದ್ರಾ ಬಡಾವಣೆ ದಕ್ಷಿಣ ಭಾಗದ ಸದಸ್ಯ ಮೈಲಪ್ಪ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಾಮಾನ್ಯ ಮಹಿಳೆಗೆ ಮೀಸಲಾದ ಉಪಾಧ್ಯಕ್ಷ ಸ್ಥಾನದ ಚುನಾವಣೆಗೆ 9ನೇ ವಾರ್ಡಿನ ದೊಡ್ಡಕೇರೆ ಸದಸ್ಯೆ ಸಾವಿತ್ರಮ್ಮ ವಿಜಯೆಂದ್ರಪ್ಪ ಚುನಾವಣೆಯ ಮೂಲಕ ಆಯ್ಕೆಯಾಗಿರುವುದಾಗಿ ಚುನಾವಣಾಧಿಕಾರಿಗಳಾದ ಉಪವಿಬಾಗಾಧಿಕಾರಿ ಅಭಿಷೇಕ ತಿಳಿಸಿದರು. ಬಿಜೆಪಿಯಿಂದ ಹೊಸಕೇರಿ 7ನೇ ವಾರ್ಡಿನ ಸದಸ್ಯೆ ರಂಜಿಂತ ಸ್ಪರ್ಧಿಸಿದ್ದರು.

ಉಪಾಧ್ಯಕ್ಷ ಸ್ಥಾನವನ್ನು ಬಿಜೆಪಿ ಪಡೆಯುವ ಸಾಧ್ಯತೆಯೇ ಹೆಚ್ಚಿದ್ದರೂ ಬಿಜೆಪಿಯಲ್ಲಿ ಒಮ್ಮತದ ಅಭ್ಯರ್ಥಿ ಆಯ್ಕೆಯಾಗದ ಹಿನ್ನೆಲೆಯಲ್ಲಿ ನಿರೀಕ್ಷೆಯಲ್ಲಿರದ ಕಾಂಗ್ರೆಸ್ ಪಕ್ಷವು ಈ ಸಂದರ್ಭವನ್ನು ಸದುಪಯೋಗ ಪಡೆಯಲೇಬೇಕೆಂದು ಒಗ್ಗಟ್ಟನ್ನು ಪ್ರದರ್ಶಿಸುವ ಮೂಲಕ ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ, ಶಾಸಕ ಡಿ.ಜಿ. ಶಾಂತನಗೌಡರು ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಕಾಂಗ್ರೆಸ್‌ನಿಂದ ಉಪಾಧ್ಯಕ್ಷರಾಗಿ ಸ್ಪರ್ಧಿಸಿದ್ದ ಸಾವಿತ್ರಮ್ಮ ವಿಜಯೇಂದ್ರಪ್ಪ ಗೆಲುವಿಗೆ ಕಾರಣರಾದರು.

ಹೊನ್ನಾಳಿ ಪುರಸಭೆಯು 18 ಸದಸ್ಯರ ಬಲಹೊಂದಿದ್ದು ಬಿಜೆಪಿ 10, ಕಾಂಗ್ರೆಸ್ 5, ಪಕ್ಷೇತರ 3 ಸದಸ್ಯರ ಬಲ ಹೊಂದಿದ್ದರೆ ಲೋಕಸಭಾ ಅಭ್ಯರ್ಥಿ 1, ವಿಧಾನಸಭಾ ಅಭ್ಯರ್ಥಿ 1 ಮತವನ್ನು ಹೊಂದಿತ್ತು.

ಕಾಂಗ್ರೆಸ್‌ನ 5 ಸದಸ್ಯರು, ಪಕ್ಷೇತರರ 3 ಮತಗಳ ಬೆಂಬಲವನ್ನು ಹಾಗೂ ಲೋಕಸಭೆ, ವಿಧನಾ ಸಭೆ 2 ಮತಗಳು ಸೇರಿದಂತೆ ಒಗ್ಗಟ್ಟಿನ ಒಮ್ಮತದ ಶಕ್ತಿ ಪ್ರದರ್ಶನಕ್ಕೆ ಮುಂದಾದಾಗ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆಯಲ್ಲಿ ಮಹಿಳಾ ಸದಸ್ಯರ ಆಕಾಂಕ್ಷಿಗಳು ಹೆಚ್ಚಾದ ಕಾರಣ ಅವರಲ್ಲಿ ಒಮ್ಮತ ಮೂಡದೆ ಇಂದು ಅಚ್ಚರಿಯ ಫಲಿತಾಂಶದಿಂದ ಹೊನ್ನಾಳಿ ಪುರಸಭೆ ಕಾಂಗ್ರೆಸ್ ಪಾಲಾಗಲು (5ನೇ ಪುಟಕ್ಕೆ)

# ನ್ಯಾಯಮೂರ್ತಿ ನೇಮಕ ಒಬ್ಬರೇ ನಿರ್ಧರಿಸಲಾಗದು



ನವದೆಹಲಿ, ಸೆ. 6 - ಇಬ್ಬರು ಹಿರಿಯ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಧೀಶರಿಗೆ ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ಬಡ್ತಿ ನೀಡುವ ಬಗ್ಗೆ ಮರು ಪರಿಶೀಲಿಸುವಂತೆ ಹಿಮಾಚಲ ಪ್ರದೇಶದ ಕೊಲೀಜಿಯಂಗೆ ಸುಪ್ರೀಂ ಕೋರ್ಟ್ ತಿಳಿಸಿದೆ.

ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ವೈಯಕ್ತಿಕವಾಗಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಂತಿಲ್ಲ. ಹೈಕೋರ್ಟ್ ಕೊಲೀಜಿಯಂ ಸಂಘಟಿತವಾಗಿ ನಿರ್ಧಾರ ತೆಗೆದುಕೊಳ್ಳಬೇಕಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಹಾಗೂ ಪ್ರಶಾಂತ್ ಕುಮಾರ್ ಮಿಶ್ರ ಅವರನ್ನು ಒಳಗೊಂಡ ಈ ಬಗ್ಗೆ ಸೂಚನೆ ನೀಡಿದೆ.

ತಮಗೆ ಅರ್ಹತೆ ಹಾಗೂ ಹಿರಿತನ ಇದ್ದರೂ ಸಹ ಹೈಕೋರ್ಟ್ ನ್ಯಾಯಮೂರ್ತಿ ಸ್ಥಾನಕ್ಕೆ ಬಡ್ತಿ ನೀಡಲು ಪರಿಗಣಿಸಿಲ್ಲ ಎಂದು ಇಬ್ಬರು ಜಿಲ್ಲಾ ಮುಖ್ಯ ನ್ಯಾಯಾಧೀಶರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು. ಹೈಕೋರ್ಟ್‌ಗೆ ಬಡ್ತಿ ನೀಡುವುದಕ್ಕೆ ಸಂಬಂಧಿಸಿದಂತೆ ಕೊಲೀಜಿಯಂ ಸದಸ್ಯರು ಜೊತೆಯಾಗಿ ಚರ್ಚೆ ನಡೆಸಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಈ ಹಿನ್ನೆಲೆಯಲ್ಲಿ ನ್ಯಾಯಾಧೀಶರಾದ ಚಿರಾಗ್ ಭಾನು ಸಿಂಗ್ (4ನೇ ಪುಟಕ್ಕೆ)

## ಕಟ್ಟಡದಿಂದ ಜಿಗಿದು ಮಹಿಳಾ ಪೊಲೀಸ್ ಆತ್ಮಹತ್ಯೆ

ಇಂದೋರ್, ಸೆ. 6 - ಮಹಿಳಾ ಪೊಲೀಸ್ ಒಬ್ಬರು ಮಧ್ಯ ಪ್ರದೇಶದ ಪೊಲೀಸ್ ತರಬೇತಿ ಕಾಲೇಜಿನ ಬಹುಮಹಡಿ ಕಟ್ಟಡದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

32 ವರ್ಷದ ನೇಹಾ ಶರ್ಮಾ ತರಬೇತಿ ಕೇಂದ್ರದಲ್ಲಿ ಸಬ್ ಇನ್ಸ್‌ಪೆಕ್ಟರ್ ಹಂತದ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಆತ್ಮಹತ್ಯೆಗೆ ಕಾರಣವೇನೆಂಬುದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ.

# ಎತ್ತಿನಹೊಳೆ 1ನೇ ಹಂತಕ್ಕೆ ಚಾಲನೆ

## ನೀರು ಕೊಡುವ, ಕೆರೆ ತುಂಬಿಸುವ ಗ್ಯಾರಂಟಿ : ಸಿದ್ದರಾಮಯ್ಯ



ಬೆಂಗಳೂರು, ಸೆ. 6 - ಕಣ್ಣೆದುರಿಗಿರುವ ಸತ್ಯವನ್ನು ಸುಳ್ಳು ಎಂದು ಬಿಂಬಿಸಿ ನಿಮ್ಮನ್ನು ಬಕ್ರಾ ಮಾಡಲು ಯತ್ನಿಸುತ್ತಿರುವವರ ಬಗ್ಗೆ ಹುಷಾರಾಗಿರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದ್ದಾರೆ.

ನಮ್ಮದು ನುಡಿದಂತೆ ನಡೆಯುವ ಸರ್ಕಾರ, ಹಿಂದೆ ಅಧಿಕಾರದಲ್ಲಿ ಇದ್ದಾಗ ಎತ್ತಿನಹೊಳೆ ಯೋಜನೆಗೆ ಅಡಿಪಾಯ ಹಾಕಿದ್ದು, ಈಗ ಮತ್ತೆ ಅಧಿಕಾರಕ್ಕೆ ಬಂದು ಬರಡು ಭೂಮಿಗೆ ನೀರು ಹರಿಸುವ ಕಾರ್ಯಕ್ಕೆ ಚಾಲನೆ ನೀಡಿದ್ದೇನೆ. ಅಪನಂಬಿಕೆ ಸೃಷ್ಟಿಸುವವರ ಮಾತುಗಳನ್ನು ಕೇಳಬೇಡಿ, ನಿಮ್ಮ ಕಣ್ಣೆದುರಿಗೆ ಇರುವುದನ್ನು ನಂಬಿ ಎಂದು ಕರೆ ನೀಡಿದ್ದಾರೆ.

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ 1ನೇ ಹಂತಕ್ಕೆ ಬೈಕೆರೆ ದೊಡ್ಡನಾಗರದಲ್ಲಿ ಇಂದು ಚಾಲನೆ ನೀಡಿ ಮಾತನಾಡಿದ ಅವರು, ಎತ್ತಿನ ಹೊಳೆ ಯೋಜನೆಯ ಎರಡನೇ ಹಂತ 2027ರ ವೇಳೆಗೆ ಪೂರ್ಣಗೊಳ್ಳಲಿದ್ದು, 7 ಜಿಲ್ಲೆಗಳ ಲಕ್ಷಾಂತರ ಮನೆಗಳಿಗೆ ಕುಡಿಯುವ ನೀರು ತಲುಪುವುದು ಶತಃಸಿದ್ಧ ಎಂದರು.

ಎತ್ತಿನಹೊಳೆ ಯೋಜನೆಗೆ ತಮ್ಮ ಕಾಲದಲ್ಲೇ ಭೂಮಿಪೂಜೆ ನಡೆದಿತ್ತು. ಮೊದಲ ಹಂತದ ಯೋಜನೆಯನ್ನೂ ನಾನೇ ಉದ್ಘಾಟಿಸಿದ್ದೆ. ಎರಡನೇ ಹಂತದ ಯೋಜನೆಯನ್ನೂ ನಾನೇ ಉದ್ಘಾಟಿಸಿ ಯೋಜನೆಯನ್ನು ಪೂರ್ಣ ಮಾಡಿ ಕುಡಿಯುವ ನೀರನ್ನು ಕೊಟ್ಟೇ ಕೊಡುತ್ತೀವಿ, ಕೆರೆಗಳನ್ನು ತುಂಬಿಸುವುದೂ ಗ್ಯಾರಂಟಿ ಎಂದು (4ನೇ ಪುಟಕ್ಕೆ)

# ಸರ್ಕಾರಿ ಶಾಲಾ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕು

## ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ರಾಣೇಬೆನ್ನೂರು ಶಾಸಕ ಪ್ರಕಾಶ್ ಕೋಳಿವಾಡ ಅಭಿಮತ



ರಾಣೇಬೆನ್ನೂರು, ಸೆ.6- ಖಾಸಗಿ ಶಾಲೆಯಂತೆ, ಸರ್ಕಾರಿ ಶಾಲೆಯ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕು ಎಂದು ಶಾಸಕ ಪ್ರಕಾಶ್ ಕೋಳಿವಾಡ ಹೇಳಿದರು.

ಇಲ್ಲಿನ ಎಪಿಎಂಸಿ ಸಮುದಾಯ ಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಕರು ತಾಂತ್ರಿಕತೆ ಅಳವಡಿಸಿಕೊಂಡು ಮಕ್ಕಳಿಗೆ ಸ್ಪೋಕನ್ ಇಂಗ್ಲಿಷ್ ಹಾಗೂ ಜೀವನ ಕೌಶಲ್ಯಗಳನ್ನು ಕಲಿಸಿದಾಗ ವಿದ್ಯಾರ್ಥಿಗಳಿಗೆ ಸುಂದರ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಲಿದೆ ಎಂದರು.

ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ತಂದರೆ ದೇಶದ ಪರಿಸ್ಥಿತಿ ಬದಲಾಗಲಿದೆ. ಈ ನಿಟ್ಟಿನಲ್ಲಿ ಶಿಕ್ಷಕರ ಚಿಂತನೆಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಬದಲಾವಣೆ ತರುವಂತಾಗಲಿ ಎಂದು ತಿಳಿಸಿದರು.

ರಾಣೇಬೆನ್ನೂರಿನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಮೀಸಲಿರಿಸಿ, ಅನೇಕ ತಾಂತ್ರಿಕ ಬದಲಾವಣೆ ಮಾಡಿರುವುದಾಗಿ ತಿಳಿಸಿದ ಶಾಸಕರು, ಪಿಯುಸಿಯಲ್ಲಿ ವಿಜ್ಞಾನ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಪೈಲಟ್ ಹಾಗೂ ಲೋಕೋ ಮೋಟಿವ್ ಚಾಲಕರಾಗಲು ಬಯಸಿದರೆ ತರಬೇತಿಗೆ ಸಹಾಯ ಮಾಡುವುದಾಗಿ ತಿಳಿಸಿದರು.

ಮಕ್ಕಳ ಶೈಕ್ಷಣಿಕ ಪ್ರಗತಿ ಹಾಗೂ ಅವರ ಸಾಧನೆಗಳಲ್ಲಿ ಭಾಗಿಯಾಗುವ ಶಿಕ್ಷಕರು, ಪಠ್ಯದಾಚೆಗಿನ ಹೊಸ ಅನ್ವೇಷಣೆಗಳ (4ನೇ ಪುಟಕ್ಕೆ)

# ಗಣೇಶೋತ್ಸವ ಸಂಭ್ರಮಕ್ಕೆ ಸಜ್ಜಾದ ದೇವನಗರಿ





ಕೊಳ್ಳಲು ಅಂದದ ಗಣೇಶನ ವಿಗ್ರಹ ಆಯ್ಕೆಯಲ್ಲಿರುವ ಮಹಿಳೆ. ಮಾರುಕಟ್ಟೆಯಲ್ಲಿ ಬಾಳೆ ಕಂದು ಖರೀದಿಸುತ್ತಿರುವುದು (ಬಲಚಿತ್ರ)

ದಾವಣಗೆರೆ, ಸೆ.6- ಗೌರಿ ಗಣೇಶ ಹಬ್ಬವನ್ನು ಸಂಭ್ರಮ-ಸಡಗರದಿಂದ ಆಚರಿಸಲು ನಗರದ ಜನತೆ ಸಜ್ಜಾಗಿದ್ದು, ಹಬ್ಬಕ್ಕೆ ಬೇಕಾಗಿರುವ ಗಣೇಶನ ವಿಗ್ರಹಗಳು, ಹೂವು, ಹಣ್ಣು, ಪೂಜಾ ಸಾಮಗ್ರಿಗಳು, ಅಗತ್ಯ ವಸ್ತುಗಳ ಖರೀದಿ ಸಂಭ್ರಮ ಜೋರಾಗಿತ್ತು.

ವರಮಹಾಲಕ್ಷ್ಮಿ ಹಬ್ಬದ ವೇಳೆ ಗಗನಕ್ಕೇರಿದ್ದ ಹೂವು-ಹಣ್ಣು ಬೆಲೆ ಈಗ ಸ್ವಲ್ಪ ಇಳಿದಿತ್ತಾದ್ದರೂ, ಗೌರಿ-ಗಣೇಶ ಹಬ್ಬಕ್ಕೆ ಮತ್ತೆ ಏರಿಕೆಯಾಗಿದೆ. ಕೆಲವು ತರಕಾರಿಗಳ ಬೆಲೆ ಹೆಚ್ಚಿದರೆ, ಹಣ್ಣುಗಳ ಬೆಲೆಯಲ್ಲಿ ಹೆಚ್ಚೇನೂ ವ್ಯತ್ಯಾಸವಿಲ್ಲ.

ನಗರದ ಕೆ.ಆರ್.ಮಾರುಕಟ್ಟೆಯಲ್ಲಿ ಬೆಳಗಿನ ಜಾವದ ವೇಳೆಗೆ ಖರೀದಿಗಾಗಿ ಜನ ಜಮಾಯಿಸಿದ್ದರು. ಮಹಾನಗರ ಪಾಲಿಕೆ ಬಳಿ, ಮಂಡಿಪೇಟೆ, ಗಡಿಯಾರ ಕಂಬದ ಸುತ್ತಮುತ್ತಲ ರಸ್ತೆಗಳಲ್ಲಿ ಜನ ದಟ್ಟಣೆ ಹೆಚ್ಚಿತ್ತು. ಸಂಚಾರ ದಟ್ಟಣೆಗೆ ಪೊಲೀಸರು ಹರಸಾಹಸ ಪಡುತ್ತಿದ್ದರು.

ಬಾಳೆಕಂದು, ಹೂವಿನಹಾರ, ಪೂಜಾ ಸಾಮಗ್ರಿಗಳ (5ನೇ ಪುಟಕ್ಕೆ)

## ದರ್ಶನಕ್ಕೆ ಸಿದ್ಧವಾಗಿವೆ ಬಹುರೂಪಿ ವಿನಾಯಕನ ಮೂರ್ತಿಗಳು

ಬಗೆ ಬಗೆಯ ರೂಪಗಳಲ್ಲಿ ದರ್ಶನ ನೀಡಲು ಗಣೇಶನೂ ಕಾತರನಾಗಿದ್ದಾನೋ ಎಂಬಂತೆ ವಿಗ್ರಹಗಳು ಸಿದ್ಧಗೊಂಡಿವೆ. ಮನೆಗಳಲ್ಲಿ ಚಿಕ್ಕ ಚಿಕ್ಕ ಮಂಟಪಗಳು ಸಿದ್ಧಗೊಂಡಿದ್ದರೆ, ಸಂಘ-ಸಂಸ್ಥೆಗಳು ಸ್ಪರ್ಧೆಗಿಳಿದಿದಂತೆ ಮಂಟಪಗಳನ್ನು ಅಲಂಕರಿಸಿವೆ. ಮಾರ್ಗದುದ್ದಕ್ಕೂ ಕೇಸರಿ ಬಾವುಟ, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ.

**ಹೈಸ್ಕೂಲ್ ಮೈದಾನದಲ್ಲಿ ಕಾಶಿ ವಿಶ್ವನಾಥ ಮಂದಿರ:** ದಾವಣಗೆರೆ ಮಹಾನಗರದ ಹೈಸ್ಕೂಲ್ ಮೈದಾನದಲ್ಲಿ ಹಿಂದೂ ಮಹಾಗಣಪತಿ ಟ್ರಸ್ಟ್, ಈ ಬಾರಿ ಕಾಶಿವಿಶ್ವನಾಥ ದೇವಾಲಯದ ಮಾದರಿ ನಿರ್ಮಾಣ ಮಾಡಲಾಗಿದೆ. 18ಅಡಿ ಎತ್ತರದ ಶಿವರೂಪಿ ವಿನಾಯಕನ ಮೂರ್ತಿ ಪ್ರತಿಷ್ಠಾಪನೆಗೆ ಟ್ರಸ್ಟ್ ಮುಂದಾಗಿದೆ. ಕೊಲ್ಕತ್ತಾದ 25ಕ್ಕೂ ಹೆಚ್ಚು ಕಲಾವಿದರು 200ಅಡಿ ಉದ್ದ, 100ಅಡಿ ಅಗಲ ವಿಸ್ತೀರ್ಣದಲ್ಲಿ ಈ ಕಾಶಿಯ ದೇಗುಲ ಮಾದರಿ ನಿರ್ಮಿಸಿದ್ದಾರೆ. ಮಂಟಪದ ಒಳಗಡೆ ಮಹರ್ಷಿ ಭಗೀರಥರ ಕಥಾನಕ ಪ್ರದರ್ಶನದ ನಡೆಯಲಿದೆ.


**ಒಣ ದ್ರಾಕ್ಷಿ ಗಣಪತಿ:** (5ನೇ ಪುಟಕ್ಕೆ)

## ವಿಗ್ರಹಗಳ ವಿಸರ್ಜನೆಗೆ ಪಾಲಿಕೆ ಸ್ಥಳ ನಿಗದಿ

ಮಹಾನಗರ ಪಾಲಿಕೆ ವತಿಯಿಂದ ಸೆ.7 ಮತ್ತು 9 ರಂದು ಶ್ರೀ ಗಣೇಶ ವಿಗ್ರಹಗಳ ತಾತ್ಕಾಲಿಕ ವಿಸರ್ಜನೆಗೆ ಆಯ್ದ ಸ್ಥಳಗಳಲ್ಲಿ ಟ್ರಾಕ್ಟರ್ ನಿಲುಗಡೆ ಮಾಡಲಾಗಿದೆ.

ಹಗೇದಿಬ್ಬ ವೃತ್ತ, ಗಾಂಧಿನಗರ, ರಾಜಕುಮಾರ ಶಾಲೆ ಹತ್ತಿರ, ಕುರುಬರ ಕೇರಿ, ಮೈಲಾರಲಿಂಗೇಶ್ವರ ದೇವಸ್ಥಾನದ ಹತ್ತಿರ ಕೊಂಡಜ್ಜಿ ರಸ್ತೆ, ಕೋರ್ಟ್ ಹಿಂಭಾಗ, ದೇವರಾಜ ಅರಸ್ ಬಡಾವಣೆ ಶಿವಾಜಿ ವೃತ್ತ, ದುರ್ಗಾಂಬಿಕ ದೇವಸ್ತಾನದ ಹತ್ತಿರ ಕುರುಬರ ಕೇರಿ. ಹೊಂಡದ ವೃತ್ತ, ವೆಂಕಟೇಶ್ವರ ವೃತ್ತ, ಬೇತೂರು ರಸ್ತೆ, ವಿಠಲ ಮಂದಿರ ಹತ್ತಿರ, ಮಹಾರಾಜ ಪೇಟೆ. ಹಾಸಬಾವಿ ವೃತ್ತ, ಚೌಕಿಪೇಟೆ. ಪಾರ್ಕ್ ಹತ್ತಿರ, 3ನೇ ಮುಖ್ಯ ರಸ್ತೆ, ವಿನೋಬನಗರ ರಾಮ್ ಆಂಡ್ ಕೋ ಸರ್ಕಲ್, ಪಿ.ಜೆ. (5ನೇ ಪುಟಕ್ಕೆ)

ಗಣಪತಿ ಹಬ್ಬದ ಶುಭಾಶಯಗಳು



ಹೊಸ ಹೋಟೆಲ್ ವೈಭವದ ಪ್ರಾರಂಭ
ಊಟ ಮತ್ತು ಉಪಹಾರ ಹೋಟೆಲ್
ದಿನಾಂಕ : 08.09.2024ರ ಭಾನುವಾರ ಮಧ್ಯಾಹ್ನ 12 ಗಂಟೆಗೆ



ಪೂಜೆ ಮತ್ತು ಪ್ರಾರಂಭ



ಅನ್ನಪೂರ್ಣೇಶ್ವರಿ ಹೋಟೆಲ್
ಆಗಮಿಸಿ, ಆಶೀರ್ವದಿಸಿರಿ
ಜೋಳದ ರೊಟ್ಟಿ ಊಟ, ಚಪಾತಿ ಊಟ, ರಾಗಿಮುದ್ದೆ ಊಟ, ಉಪಹಾರ ದೊರೆಯುತ್ತದೆ.
ಪ್ರತಿ ಸೋಮವಾರ ಹೋಳಿಗೆ ಊಟ
ಕ್ಯಾಟರಿಂಗ್ ವ್ಯವಸ್ಥೆ ಇರುತ್ತದೆ
ಸ್ಥಳ : ಬಾಪೂಜಿ ಹೈಸ್ಕೂಲ್ ಹತ್ತಿರ, ದವನ್ ಕಾಲೇಜು ಪಕ್ಕ,
ಸರ್ಕಾರಿ ನಿವೃತ್ತ ನೌಕರರ ಕಲ್ಯಾಣ ಮಂಟಪದ ಪಕ್ಕ,
ನಂ. 3308/ಎ7, 12ನೇ ಮುಖ್ಯರಸ್ತೆ,
ಎಂಸಿಸಿ ಬಿ ಬ್ಲಾಕ್, ದಾವಣಗೆರೆ - 577 004



ಪ್ರೊ. ಬಿ.ಕೆ. ಗಣೇಶ್ ಬಿಸಲೇರಿ
ಮೊಬೈಲ್ ನಂ. : 88847 46258,
96206 55669

# ವಾರ ಭವಿಷ್ಯ

**ದಿನಾಂಕ : 08.09.2024 ರಿಂದ 14.09.2024ರ ವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಕೆಲಸ ಕಾರ್ಯಗಳ ಒತ್ತಡ ಎಷ್ಟೇ ಇದ್ದರೂ ಮಾನಸಿಕ ನೆಮ್ಮದಿ ನಿಮ್ಮಲ್ಲಿರುತ್ತದೆ. ಆದಾಯವು ಮಧ್ಯಮ ಗತಿಯಲ್ಲಿದ್ದರೂ, ದೈನಂದಿನ ನಿರ್ವಹಣೆಗೇನೂ ತೊಂದರೆಯಿಲ್ಲ. ಸಂಗಾತಿಯ ವೇತನ ಎಷ್ಟೇಯಿದ್ದರೂ ಅದು ಸಾಲಕಟ್ಟಲು ಸರಿಯಾಗಲಿದೆ. ಗಣಿತ ಕ್ಷೇತ್ರದಲ್ಲಿ ಶ್ರಮಿಸುತ್ತಿರುವವರಿಗೆ ಉತ್ತಮ ಫಲಿತಾಂಶ ಕಂಡುಬರಲಿದೆ. ಸೋಂಕಿನಿಂದಾಗಿ ಆರೋಗ್ಯ ಸಮಸ್ಯೆಗಳು ಎದುರಾಗಬಹುದು, ವಿದ್ಯಾರ್ಥಿಗಳ ಅಧ್ಯಯನದಲ್ಲಿ ಸಾಕಷ್ಟು ಪ್ರಗತಿ ಕಾಣಲಿವೆ. ಕೃಷಿಕರಿಗೆ ನಿರೀಕ್ಷಿತ ಲಾಭವಾಗದಿದ್ದರೂ ನಷ್ಟವಂತೂ ಖಂಡಿತಾ ಇಲ್ಲ. ಗುರುಗಳ ಸೇವೆ ಮಾಡಿ.ಭಾನು-ಮಂಗಳ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಕುಟುಂಬಕ್ಕೆ ಸಂಬಂಧಪಟ್ಟ ಕೆಲವು ವಿಚಾರಗಳಲ್ಲಿ ನೀವು ದೃಢ ನಿರ್ಧಾರ ತೆಗೆದುಕೊಳ್ಳುವುದು ಲೇಸು. ಹೊಸ ಯೋಜನೆಗಳಿಗೆ ಹಣಕಾಸಿನ ಸಮಸ್ಯೆ ಎದುರಾಗಬಹುದು. ಆದಾಯದ ಮೂಲದಲ್ಲಿ ಹೆಚ್ಚಳದ ನಿರೀಕ್ಷೆ ಬೇಡ. ನಿಮ್ಮ ಕಾರ್ಯ ಕ್ಷೇತ್ರದಲ್ಲೇ ಆದಾಯವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿ. ಮಹಿಳೆಯರು ವ್ಯಕ್ತಿ ಬಗ್ಗೆ ತಿಳಿಯದೇ ಅಪರಿಚಿತರೊಂದಿಗೆ ಹಣಕಾಸಿನ ವ್ಯವಹಾರ ಮಾಡಿದಲ್ಲಿ ತೊಂದರೆಗೆ ಖಂಡಿತಾ ಸಿಲುಕುವಿರಿ. ಪದವೀಧರರಿಗೆ ಆಡಳಿತಾತ್ಮಕ ಪರೀಕ್ಷೆ ತೆಗೆದುಕೊಳ್ಳಲು ಇದು ಸಕಾಲವಾಗಿದೆ. ಗೋ ಸೇವೆ ಮಾಡಿ. ಬುಧ-ಶುಕ್ರ-ಶನಿ. ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಯಾವುದೇ ಕಾರಣಕ್ಕೂ ಹಿರಿಯರೊಂದಿಗೆ ವೈಮನಸ್ಸು ಕಟ್ಟಿಕೊಳ್ಳಬೇಡಿ, ಆದಾಯವು ನಿರೀಕ್ಷಿತ ಮಟ್ಟದಲ್ಲಿರದಿದ್ದರೂ ಅದರ ಸಮೀಪಕ್ಕೆ ಬರಲಿದೆ ಎಂಬುದೇ ಸಂತೋಷದಾಯಕ ವಿಚಾರ. ಊಟೋಪಚಾರ ವಿಚಾರದಲ್ಲಿ ಕಟ್ಟುನಿಟ್ಟಾಗಿರದಿದ್ದರೆ ಉದರ ಸಂಬಂಧಿ ರೋಗಗಳು ಬಾಧಿಸಬಹುದು. ಬಂಧುಗಳೊಬ್ಬರ ಆರೋಗ್ಯದ ವಿಚಾರದಲ್ಲಿ ನೀವೇ ಹೆಚ್ಚಿನ ಪ್ರಮಾಣದಲ್ಲಿ ಖರ್ಚು ಮಾಡಬೇಕಾದೀತು, ಅಧ್ಯಾಪಕ ವರ್ಗದವರಿಗೆ ಉತ್ತಮ ದಿನಗಳು, ಭೂಮಿ ವ್ಯವಹಾರದಿಂದ ಹೆಚ್ಚಿನ ಲಾಭದ ನಿರೀಕ್ಷೆಬೇಡ. ದುರ್ಗಾದೇವಿಯನ್ನು ಧ್ಯಾನಿಸಿ. ಸೋಮ-ಬುಧ ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ನೀವು ತೆಗೆದುಕೊಳ್ಳುವ ಗಟ್ಟಿನಿರ್ಧಾರಗಳೇ ಯಶಸ್ಸಿನ ಸೋಪಾನವಾಗಲಿದೆ. ಯುವಕರು ತಮ್ಮ ಪೂರ್ವಿಕರ ವ್ಯವಹಾರದಲ್ಲಿ ನೈಪುಣ್ಯವನ್ನು ಸಾಧಿಸಿಸುವರು. ಉತ್ತಮಗೊಳ್ಳುತ್ತಿರುವ ಆದಾಯ ಆತ್ಮ ವಿಶ್ವಾಸವನ್ನು ಹೆಚ್ಚಿಸಲಿದೆ. ಕೆಲವು ಹಣಕಾಸಿನ ಸಮಸ್ಯೆಗಳನ್ನು ಬಗೆಹರಿಸಲಿದೆ. ಆಸ್ತಿಗೆ ಸಂಬಂಧಪಟ್ಟ ವಿಚಾರದಲ್ಲಿ ಸೋದರಿಯೊಂದಿಗೆ ಮನಸ್ತಾಪವಾಗಲಿದೆ. ಇದನ್ನು ನಾಜೂಕಿನಿಂದ ಬಗೆಹರಿಸಿಕೊಳ್ಳುವುದು ಮೇಲು, ಚಿಕ್ಕಮಕ್ಕಳಿಗೆ ಮೂಳೆಸಂಬಂಧಿ ತೊಂದರೆ ಕಾಣಿಸಿಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ವಿಷ್ಣು ಸಹಸ್ರ ನಾಮ ಪಠಿಸಿ. ಭಾನು-ಸೋಮ-ಬುಧ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಸಂಗಾತಿಯು ವಾಸ್ತವದ ಪರಿಜ್ಞಾನವಿಲ್ಲದೇ ಮಾಡಿದ ಹೂಡಿಕೆ ನಷ್ಟಕ್ಕೆ ಕಾರಣವಾದೀತು. ಇದನ್ನು ಸ್ವಲ್ಪಗಂಭೀರವಾಗಿ ಪರಿಗಣಿಸುವುದು ಲೇಸು. ವಿದ್ಯಾರ್ಥಿಗಳು ಮುಂದಿನ ಭವಿಷ್ಯದ ಬಗ್ಗೆ ಈಗಲೇ ಒಂದು ದೃಢ ನಿರ್ಧಾರಕ್ಕೆ ಬರುವುದು ಮೇಲು, ಪ್ರೇಮಿಗಳ ನಡುವೆ ಉಂಟಾದ ಭಿನ್ನಾಭಿಪ್ರಾಯ ಘರ್ಷಣೆಗೆ ಕಾರಣವಾಗಲಿದೆ. ಸ್ನೇಹಿತರು ನಿಮ್ಮ ಆಲೋಚನೆಗೆ ಸ್ಪಂದಿಸದೇ ಹೋಗುವರು. ಮಧ್ಯಮಗತಿ ಆದಾಯ ದೈನಂದಿನಕ್ಕೆ ಪರ್ಯಾಪ್ತವಾಗಲಿದೆ. ಶುಭ ಫಲದ ಸಲುವಾಗಿ ವಿಷ್ಣು ಹಾಗೂ ಶನೈಶ್ಚರನನ್ನು ವಿಶೇಷವಾಗಿ ಆರಾಧಿಸಿ. ಭಾನು-ಗುರು-ಶುಕ್ರ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಪೂರ್ವಯೋಜಿತ ಹೊಸ ಯೋಜನೆಗಳಿಗೆ ಹಣಕಾಸು ಸಂಸ್ಥೆಗಳಿಂದ ಸಾಕಷ್ಟು ಆರ್ಥಿಕ ನೆರವು ಸಿಗಲಿದೆ. ಆದರೆ ಇದು ಸದುಪಯೋಗವಾಗುವಂತೆ ನೋಡಿಕೊಳ್ಳುವ ಜವಾಬ್ದಾರಿ ನಿಮ್ಮದಾಗಿರುತ್ತದೆ. ದ್ವಂದ್ವಾರ್ಥಗಳಿಂದ ಕೂಡಿದ ನಿಮ್ಮ ಮಾತುಕತೆ ಕೆಲವರಿಗೆ ಇರುಸು ಮುರುಸಾಗಲಿದೆ. ಇದರಿಂದ ನಿಮ್ಮ ಘನತೆಗೆ ಧಕ್ಕೆಯಾಗದಂತೆ ಎಚ್ಚರ ವಹಿಸಿ. ನಿರುದ್ಯೋಗಿ ಪದವೀಧರರು ಸಿಕ್ಕ ಕೆಲಸದೊಂದಿಗೆ ಹೊಂದಿಕೊಂಡು ಹೋಗುವುದು ಲೇಸು, ಯುವ ಜನರಿಗೆ ಬಂಧುಗಳ ನೆರವು ಹೆಚ್ಚಿನ ಪ್ರಮಾಣದಲ್ಲಿ ದೊರೆಯಲಿದೆ ಮಂಗಳ-ಬುಧ-ಗುರು-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಹಣಕಾಸಿನ ಪರಿಸ್ಥಿತಿ ಸಾಧಾರಣವಾಗಿದ್ದರೂ ಚಿಂತೆಬೇಡ. ಯಾವುದೋ ವಿಚಾರವಾಗಿ ಬಹಳ ಚಿಂತಿಸುವ ನೀವು ಹೊರಗಡೆ ಸಂತಸದಿಂದಿರುವಂತೆ ಕಂಡುಬಂದರೂ, ಒಳಗಡೆ ತಳಮಳ ತಪ್ಪಿದ್ದಲ್ಲ. ಸಂಬಂಧಿಗಳಿಂದ ಅಥವಾ ಸ್ನೇಹಿತರಿಂದ ನಿರೀಕ್ಷಿತ ಗೌರವ ಸಿಗದೇ ಹೋಗಬಹುದು. ತರುಣರಲ್ಲಿ ವಾಕ್ಚಾತುರ್ಯ ಇಮ್ಮಡಿಸಲಿದೆ. ಕೊಬ್ಬಿನ ಪದಾರ್ಥಗಳ ಅತಿ ಸೇವನೆಯಿಂದಾಗಿ ಕೊಬ್ಬಿನಾಂಶಕ್ಕೆ ಸಂಬಂಧಿಸಿದ ಸಮಸ್ಯೆಗಳು ಎದುರಾಗಲಿವೆ. ಹಿರಿಯರು ಕೊಡಲಿರುವ ಸಲಹೆ-ಸೂಚನೆಗಳು ಸಕಾಲಿಕವಾಗಿರುತ್ತವೆ ಎಂಬುದು ನೆನಪಿರಲಿ. ಅನ್ನ ದಾನ ಮಾಡಿ. ಸೋಮ-ಗುರು-ಶುಕ್ರ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಅವ್ಯಕ್ತ ಗಾಂಭೀರ್ಯವೊಂದು ನಿಮ್ಮನ್ನು ಆವರಿಸಿಕೊಳ್ಳಲಿದ್ದು, ಇದು ಬೇರೆಯವರಿಗೆ ಪ್ರಶ್ನಾರ್ಥಕವಾಗಲಿದೆ. ವ್ಯಾಪಾರ-ವ್ಯವಹಾರಗಳಲ್ಲಿ ನಿಮ್ಮ ಪ್ರತಿಸ್ಪರ್ಧಿಗಳಿಗೆ ಒಗಟಾಗಿ ಕಾಣುವಿರಿ. ಆದಾಯವು ಮಂದಗತಿಯಲ್ಲಿರುವುದರಿಂದ ಕೌಟುಂಬಿಕ ವೆಚ್ಚಗಳ ಮೇಲೆ ಕಡಿವಾಣ ಹಾಕುವುದು ಅನಿವಾರ್ಯವಾಗಲಿದೆ, ಪೂರ್ವಾರ್ಜಿತ ಪುಣ್ಯದಿಂದಾಗಿ ತೀರ್ಥಯಾತ್ರೆ ಮಾಡುವ ಯೋಗವಿದ್ದು, ಅದರಲ್ಲಿ ಶ್ರದ್ಧೆಯಿಂದ ಪಾಲ್ಗೊಳ್ಳುವಿರಿ. ಇದಕ್ಕೆ ಬೇಕಾದ ಪೂರ್ವಸಿದ್ಧತೆ ಉತ್ತಮವಾಗಿರಲಿ. ಶೀತಬಾಧೆಯಿರುವವರು ಎಚ್ಚರದಿಂದಿರುವುದು ಉತ್ತಮ. ಭಾನು-ಮಂಗಳ-ಬುಧ-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ನಿಮ್ಮ ಆದಾಯ ಕಡಿಮೆ ಇದ್ದರೂ ಆತ್ಮವಿಶ್ವಾಸವನ್ನು ಎಲ್ಲರೂ ಮೆಚ್ಚುವರು. ಮಡದಿಯ ತವರು ಮನೆಯಿಂದ ಸಿಗಲಿರುವ ನೆರವನ್ನು ನಿಸ್ಸಂಕೋಚವಾಗಿ ತೆಗೆದುಕೊಳ್ಳುದು ಲೇಸು. ವಿದ್ಯಾರ್ಥಿಗಳಿಗೆ ಈಗ ಉತ್ತಮ ಫಲಿತಾಂಶ ಪಡೆಯುವ ಯೋಗ ಬಂದಿದೆ. ಹಿರಿಯರ ಹರಕೆ-ಕೋರಿಕೆಗಳನ್ನು ಆದಷ್ಟು ಬೇಗ ತೀರಿಸಲು ಪ್ರಯತ್ನಿಸಿ. ವ್ಯವಹಾರದಲ್ಲಿ ಎದುರಾಳಿಗಳ ಯಾವುದೇ ತಂತ್ರ-ಕುತಂತ್ರಗಳು ಫಲಿಸವು. ಕೃಷಿ ವಿಜ್ಞಾನವನ್ನು ಓದುತ್ತಿರುವವರಿಗೆ ದೇಶ-ವಿದೇಶಗಳಲ್ಲಿ ಹೆಚ್ಚಿನ ಅವಕಾಶ ದೊರೆಯಲಿದೆ. ಮಹಿಳೆಯರಿಗೆ ಉತ್ತಮದಿನಗಳು. ಬುಧ-ಗುರು-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಕಠಿಣ ಪರಿಶ್ರಮದಿಂದ ಸಂಪಾದಿಸುವ ನಿಮಗೆ ಸುಖ-ಸಂತೋಷ ನೆಮ್ಮದಿ ಸಿಗಲಿದೆ. ಆರಂಭಿಸಿರುವ ಹೈನುಗಾರಿಕೆ ಇನ್ನು ಮುಂದೆ ಲಾಭದಾಯಕ ವಾಗಲಿದೆ, ಹದಗೆಟ್ಟಿದ್ದ ಹಿರಿಯರ ಆರೋಗ್ಯದಲ್ಲಿ ಸಾಕಷ್ಟುಸುಧಾರಣೆ, ವಿದೇಶದಲ್ಲಿ ಓದಬೇಕೆಂಬ ಹೆಬ್ಬಯಕೆಗೆ ಸಾಮಾಜಿಕ ನೆರವು ಸಿಗಲಿದೆ. ನಿಶ್ಚಿತವಾಗಿದ್ದ ಮಂಗಳ ಕಾರ್ಯಗಳು ಕಾರಣಾಂತರದಿಂದ ಮುಂದೆ ಹೋಗಲಿವೆ. ರಾಜಕೀಯ ರಂಗವನ್ನು ಪ್ರವೇಶಿಸುವ ಮೊದಲು ಪಕ್ಷದ ಸ್ಥಿತಿಗತಿಯ ಅರಿವಿರುವುದು ಬಹಳ ಮುಖ್ಯ ಎಂಬುದು ನೆನಪಿರಲಿ. ಸೋಮ-ಗುರು-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ರಾಸಾಯನಿಕ ವಸ್ತುಗಳನ್ನು ಮಾರಾಟ ಮಾಡುವವರಿಗೆ ಈ ಉದ್ಯಮದಿಂದ ಹೆಚ್ಚಿನ ಲಾಭವಾಗಲಿದೆ. ಶ್ರಮಿಕ ಕಾರ್ಮಿಕರಿಗೆ ತಕ್ಕ ಪ್ರತಿಫಲ ಸಿಗಲಿದೆ. ವೃಥಾತಿರು ಗಾಟದಿಂದ ಆರೋಗ್ಯದ ಮೇಲೆ ಅಡ್ಡ ಪರಿಣಾಮ ಬೀರಬಹುದು, ನಿಮ್ಮ ವ್ಯವಹಾರದಲ್ಲಿ ಸೋದರಿಯು ಪಾಲುದಾರಳಾಗಿ ಬರುವ ಸಂಭವವಿದೆ, ಅವಿವಾಹಿತರಿಗೆ ಕಂಕಣ ಭಾಗ್ಯ ಇಷ್ಟರಲ್ಲೇ ಕೂಡಿಬರಲಿದೆ, ಹಿರಿಯರ ಬಹುದಿನಗಳ ಕೋರಿಕೆಯೊಂದು ಈ ವಾರ ನೆರವೇರಲಿದೆ. ಸಾಕು ಪ್ರಾಣಿಗಳಿಂದ ಚಿಕ್ಕಮಕ್ಕಳಿಗೆ ತೊಂದರೆಯಾಗ ದಂತೆ ಎಚ್ಚರವಹಿಸಿ. ಅತಿ ಸಾಲ ಒಳ್ಳೆಯದಲ್ಲ. ಬುಧ-ಶುಕ್ರ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಸುಧಾರಿಸುತ್ತಿರುವ ಆರೋಗ್ಯ ಜೀವನದಲ್ಲಿ ಹೊಸ ಚೈತನ್ಯವನ್ನು ತುಂಬ ಲಿದೆ. ಕಟ್ಟಡ ಸಾಮಗ್ರಿ ವ್ಯಾಪಾರಿಗಳಿಗೆ ಉತ್ತಮ ವಹಿವಾಟು ನಡೆಯಲಿದೆ. ಆದಾಯ ಮಧ್ಯಮ ಸ್ಥಿತಿಯಲ್ಲಿರುವಾಗಲೇ ಅನಿರೀಕ್ಷಿತ ವೈದ್ಯಕೀಯ ವೆಚ್ಚಗಳು ಎದುರಾಗಲಿವೆ. ವಿದ್ಯಾಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ತನಿಖಾಧಿಕಾರಿಗಳಿಂದ ತೀವ್ರ ವಿಚಾರಣೆ ಎದುರಾಗಲಿದೆ. ಹೊಸದಾಗಿ ನೌಕರಿ ಸೇರಿದವರಿಗೆ ಸಹೋದ್ಯೋಗಿಗಳ ಅಸಹಕಾರ ಕಂಡುಬರಲಿದ್ದು, ಆತಂಕಕ್ಕೆ ಒಳಗಾಗುವರು, ರಕ್ತಸಂಬಂಧಿ ಆರೋಗ್ಯ ಸಮಸ್ಯೆಯಿರು ವವರು ಎಚ್ಚರಿಕೆಯಿಂದಿರಿ, ಅನ್ನದಾನ ಮಾಡಿ. ಭಾನು-ಸೋಮ-ಗುರು-ಶುಭ ದಿನಗಳು.

### ವಿಶೇಷ ದಿನಗಳು :

**ದಿನಾಂಕ : 10.9.2024 ನೇ ಮಂಗಳವಾರ ಜೇಷ್ಠಾದೇವಿ ಆಹ್ವಾನ**
**ದಿನಾಂಕ : 11.9.2024 ನೇ ಬುಧವಾರ ಜೇಷ್ಠಾದೇವಿ ಪೂಜೆ**
**ದಿನಾಂಕ :12.9.2024ನೇ ಗುರುವಾರ ಜೇಷ್ಠಾದೇವಿ ವಿಸರ್ಜನೆ ದೋರಬಂಧನ (ದಾರ ಕಟ್ಟಿಕೊಳ್ಳುವುದು). ಜಗನ್ನಾಥದಾಸರ ಆರಾಧನೆ ಶ್ರೀಕ್ಷೇತ್ರ ಮಾನ್ವಿ.**

# ಗಣೇಶ ಹಬ್ಬ: ಶ್ರೀ ಗುರು ವಾದ್ಯವೃಂದದಿಂದ 15 ದಿನಗಳ ಸಾಂಸ್ಕೃತಿಕ ಕಾರ್ಯಕ್ರಮಗಳು

ದಾವಣಗೆರೆ, ಸೆ. 6- ನಗರದ ಚಿಂದೋಡಿ ಶಾಂತರಾಜ್ ಅಸೋಸಿಯೇಷನ್ ಶ್ರೀ ಗುರು ವಾದ್ಯವೃಂದದ ವತಿಯಿಂದ ಗಣಪತಿ ಹಬ್ಬದ ಪ್ರಯುಕ್ತ ನಾಳೆ ದಿನಾಂಕ 7ರಿಂದ ಸುಮಾರು 15 ದಿನಗಳ ಕಾಲ ಕರ್ನಾಟಕ ಮಾತ್ರವಲ್ಲದೇ, ಹೊರರಾಜ್ಯದಲ್ಲಿಯೂ ಸಂಚರಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಲಿದೆ.

ಕನ್ನಡ ಸಂಗೀತ ಕ್ಷೇತ್ರಕ್ಕೆ ಕಳೆದ 51 ವರ್ಷಗಳಿಂದ ನಿರಂತರ ಸೇವೆ ಸಲ್ಲಿಸುತ್ತಿರುವ ಶ್ರೀ ಗುರು ವಾದ್ಯ ವೃಂದವು 15 ಜನ ಕಲಾವಿದರುಗಳ ತಂಡದೊಂದಿಗೆ ಪ್ರಯಾಣ ಬೆಳೆಸಲಿದ್ದು, ಸಂಗೀತ ಮತ್ತು ರಂಗಭೂಮಿಗೆ ವಿಶಿಷ್ಟ ಸೇವೆ ಸಲ್ಲಿಸಿದ ರಾಜ್ಯ ಮತ್ತು ಅಂತರರಾಷ್ಟ್ರೀಯ ಕಲಾವಿದ, ನಾಟಕ ಅಕಾಡೆಮಿ ಪ್ರಶಸ್ತಿ ವಿಜೇತ ಚಿಂದೋಡಿ ಶಂಭುಲಿಂಗಪ್ಪ ಇವರು ನೇತೃತ್ವ ವಹಿಸಿ, ನಿರ್ದೇಶನ ಮಾಡಲಿದ್ದಾರೆ.

ಚಿತ್ರಗೀತೆಗಳೊಂದಿಗೆ ಇತರೆ ಭಾಷೆಯ ಚಿತ್ರಗೀತೆಗಳು, ಮಿಮಿಕ್ರಿ ನೃತ್ಯ ಪ್ರದರ್ಶನದೊಂದಿಗೆ



ಕಾರ್ಯಕ್ರಮ ನೀಡಲಿದ್ದಾರೆ. ಗೋಪಾಲ್‌ರಾವ್ ಸಹ ನಿರ್ದೇಶಕರಾಗಿ, ರಮೇಶ್ ಕುಲಕರ್ಣಿ, ಸಿದ್ಧರಾಜ್, ಮಾರುತಿ, ಜೋಸೆಫ್, ಲಕ್ಷ್ಮಿ, ಸುನೀತಾ ಇವರ ಹಿನ್ನೆಲೆ ಗಾಯನವಿರುತ್ತದೆ.

ಈ ಸಂಗೀತ ಸಂಜೆಯ ಕಾರ್ಯಕ್ರಮದ ಮಧ್ಯೆ ಚಿಂದೋಡಿ ಶಂಭುಲಿಂಗಪ್ಪ ಮಾಲೀಕತ್ವದ ಶ್ರೀ ಸಂಚಾರಿ ಕೆ.ಬಿ.ಆರ್. ಡ್ರಾಮಾ ಕಂಪನಿಯ ತಂಡದಿಂದ ಕರ್ನಾಟಕದ ಅನೇಕ ಸಕ್ಕರೆ ಕಾರ್ಖಾನೆಗಳಲ್ಲಿ ಮತ್ತು ಹುಬ್ಬಳ್ಳಿ, ಬೊಮ್ಮನಹಳ್ಳಿ, ಸಿ.ಎನ್. ಹಳ್ಳಿ, ಸಂಕೇಶ್ವರ, ಸದಲಗ, ಸಂಗೊಳ್ಳಿ, ನೀಡಗುಂದಿ ಇನ್ನೂ ಅನೇಕ ನಗರಗಳಲ್ಲಿ ಕಂಪನಿಯ ಪ್ರಸಿದ್ಧ ನಾಟಕಗಳೊಂದಿಗೆ ಮುದುಕನ ಮದುವೆ, ಕಿವುಡ ಮಾಡಿದ ಕಿತಾಪತಿ, ಸಾಧ್ವಿ ಸರಸ್ವತಿ ಮತ್ತಿತರೆ ನಾಟಕಗಳು ಪ್ರದರ್ಶನಗೊಳ್ಳಲಿವೆ.



## ಶಾಮನೂರಿನ ಶಿವಪಾರ್ವತಿ ಬಡಾವಣೆಯಲ್ಲಿ ನಾಳೆ ವರಭೀರಲಿಂಗೇಶ್ವರ ದೇವರ ಪರವು

ದಾವಣಗೆರೆ, ಸೆ.6- ಶಾಮನೂರಿನ ಶಿರಮಗೊಂಡನಹಳ್ಳಿ ರಸ್ತೆಯ ಶಿವ-ಪಾರ್ವತಿ ಬಡಾವಣೆಯಲ್ಲಿರುವ ಶ್ರೀ ವರಭೀರಲಿಂಗೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 8ರ ಭಾನುವಾರ ಮಧ್ಯಾಹ್ನ 11 ಗಂಟೆಗೆ ಪರವು ನಡೆಯಲಿದೆ.

# ಗಣೇಶೋತ್ಸವ ಆಚರಣೆಗೆ ನಿಯಮ ಹೇರಿ ಪೊಲೀಸರ ಕಿರುಕುಳ

ದಾವಣಗೆರೆ, ಸೆ.6- ನಗರದಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ನಿಯಮಗಳು, ಅನುಮತಿ ನೀಡುವುದು ಸೇರಿದಂತೆ ವಿವಿಧ ರೀತಿಯಲ್ಲಿ ಕಿರುಕುಳ ನೀಡಲಾಗುತ್ತಿದೆ. ಮುಕ್ತ, ಶಾಂತಿಯುತ ಹಾಗೂ ಸಂಭ್ರಮದ ಗಣೇಶೋತ್ಸವ ಆಚರಣೆಗೆ ಅವಕಾಶ ಮಾಡಿಕೊಡದಿದ್ದರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಮುಂದೆ ಗಣೇಶ ಮೂರ್ತಿ ಇಟ್ಟು ಪ್ರತಿಭಟನೆ ನಡೆಸಲಾಗುವುದು ಎಂದು ಗಣಪತಿ ಮಹಾಮಂಡಳಿ ಒಕ್ಕೂಟದ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಎಚ್ಚರಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗಣೇಶ ಮೂರ್ತಿ ಪ್ರತಿಷ್ಠಾಪನೆಯ ಪೆಂಡಾಲ್ ಬಳಿ ಬಂದು ಅನುಮತಿ ಪತ್ರ ಇದೆಯಾ, ಒಂಬತ್ತು ದಿನಗಳ ಕಾಲ ಏಕೆ ಪ್ರತಿಷ್ಠಾಪನೆ ಮಾಡುತ್ತೀರಾ, ಮೂರು ದಿನಗಳು ಸಾಕಲ್ಲವೇ ? ಎಂದು ಪ್ರಶ್ನಿಸುತ್ತಾರೆ. ಅನುಮತಿ ನೀಡಲು ಮೀನಾಮೇಷ ಎಣಿಸುತ್ತಿದ್ದಾರೆಂದು ದೂರಿದರು.

ಹಿಂದೂಗಳ ಹಬ್ಬಕ್ಕೆ ಏಕೆ ರಾಜ್ಯ ಕಾಂಗ್ರೆಸ್ ಸರ್ಕಾರ ಬಿಗಿ ಕ್ರಮ ಕೈಗೊಳ್ಳುತ್ತಿದೆ. ಗಣೇಶೋತ್ಸವಕ್ಕಾಗಿ ಹಲವು ನಿಯಮಗಳನ್ನು ರೂಪಿಸಲಾಗಿದೆ. ಅನುಮತಿ ಪಡೆಯಲು ಹರ ಸಾಹಸ ಪಡುವಂತಾಗಿದೆ ಎಂದರು.

ನಾಳೆ ಶನಿವಾರವೇ ಗಣಪತಿ ಪ್ರತಿಷ್ಠಾಪನೆ ಇರುವುದರಿಂದ ಅನುಮತಿಗಾಗಿ ಆಯೋಜಕರನ್ನು ಓಡಾಡಿಸುವುದು ಎಷ್ಟರಮಟ್ಟಿಗೆ ಸರಿ ? ಎಂದು ಪ್ರಶ್ನಿಸಿದ ಅವರು, ನಗರದಲ್ಲಿ ಸುಮಾರು ನಾಲ್ಕು ನೂರಕ್ಕೂ ಹೆಚ್ಚು ಗಣಪತಿ ಪ್ರತಿಷ್ಠಾಪನೆ ಮಾಡಲಾಗುತ್ತಿದೆ ಎಂದರು. ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಶಾಂತಿಸಭೆಯಲ್ಲಿ ನಡೆದ ತೀರ್ಮಾನದಂತೆ ನಡೆದುಕೊಳ್ಳುತ್ತಿಲ್ಲ ಎಂದು ಆರೋಪಿಸಿದರು.

ಕಾಂಗ್ರೆಸ್ ಸರ್ಕಾರ ಹಿಂದೂ ವಿರೋಧಿ ನೀತಿ ಅನುಸರಿಸುತ್ತಿರುವುದು ಸರಿಯಲ್ಲ. ಪರಿಸರ ಮಾಲಿನ್ಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಆದರೆ ವರ್ಷಪೂರ್ತಿ ಸುಮ್ಮನಿರುವ ಪರಿಸರ ಅಧಿಕಾರಿಗಳಿಗೆ ಗಣಪತಿ ಹಬ್ಬ ಬಂದಾಗ ಮಾತ್ರ ಪರಿಸರ ಕಾಳಜಿ ಜಾಸ್ತಿಯಾಗುತ್ತದೆ. ಗಣಪತಿ ಸಮಿತಿ ಅನ್ನ ಸಂತರ್ಪಣೆಗೆ ಕಂಡೀಷನ್ ಹಾಕುವುದು ಸಲ್ಲದು ಎಂದರು.

ಶಾಲೆಗಳಲ್ಲಿನ ಬಿಸಿಯೂಟ, ಅಂಗನವಾಡಿ ಕೇಂದ್ರಗಳಲ್ಲಿ ನೀಡುವ ಆಹಾರ ಪರೀಕ್ಷೆ ಮಾಡುತ್ತಾರೆಯೇ? ಡಾಬಾ, ಹೋಟೆಲ್‌ಗಳಲ್ಲಿ ಎಷ್ಟರಮಟ್ಟಿಗೆ ಸ್ವಚ್ಛತೆ ಇದೆ. ಎಷ್ಟು ಹೋಟೆಲ್‌ಗಳಿಗೆ ಭೇಟಿ ನೀಡಿ ಪರೀಕ್ಷಿಸಿದ್ದಾರೆ ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಬಿ. ರಮೇಶ್ ನಾಯ್ಕ, ಬೇತೂರು ಬಸವರಾಜ್, ಹರೀಶ್ ಹೊನ್ನೂರು, ನವೀನ್ ಕುಮಾರ್, ಹೆಚ್.ಬಿ. ಆರ್. ರವಿಕುಮಾರ್, ಶಂಕರಗೌಡ ಬಿರಾದಾರ್, ಟಿಂಕರ್ ಮಂಜಣ್ಣ, ಶಿವನಗೌಡ ಪಾಟೀಲ್, ರಾಜುಗೌಡ ಉಪಸ್ಥಿತರಿದ್ದರು.

# ಗಣೇಶೋತ್ಸವ ಸಂಭ್ರಮಕ್ಕೆ ಸಜ್ಜಾದ ದೇವನಗರಿ

**(3ನೇ ಪುಟದಿಂದ)** ಖರೀದಿ ಭರಾಟೆ ಹೆಚ್ಚಾಗಿತ್ತು. ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ಗ್ರಾಮೀಣ ಭಾಗದಿಂದ ಜನರು ಬಾಳೇ ಕಂದು, ಚಂಡಿ ಹೂ ಸೇರಿದಂತೆ ಹಲವು ವಸ್ತುಗಳನ್ನು ತಂದು ಮಾರಾಟಕ್ಕೆ ತಂದಿದ್ದಾರೆ. ಜೊತೆಗೆ ನಗರದ ವಿವಿಧ ಭಾಗಗಳಲ್ಲಿ ಹೂವು, ಹಣ್ಣಿನ ತಾತ್ಕಾಲಿಕ ಮಳಿಗೆಗಳು, ಗಣಪತಿ ವಿಗ್ರಹಗಳನ್ನು ಮಾರಾಟ ಮಾಡುವ ಅಂಗಡಿಗಳು ತಲೆ ಎತ್ತಿವೆ. ಮಾರುಕಟ್ಟೆಗೆ ಬಗೆ–ಬಗೆಯ ಗೌರಿ-ಗಣೇಶ ಮೂರ್ತಿಗಳು ಬಂದಿವೆ. ಗೌರಿ, ಗಣೇಶ ಮೂರ್ತಿಗಳ ಮಾರಾಟದ ಭರಾಟೆ ಜೋರಾಗಿತ್ತು.

200 ರೂ.ಗಳಿಂದ ಆರಂಭವಾದ ಗಣೇಶನ ಮೂರ್ತಿಗಳ ದರ 5ರಿಂದ 10ಸಾವಿರ ರೂ.ವರೆಗೂ ಮಾರಾಟವಾಗುತ್ತಿವೆ. ಹಬ್ಬಕ್ಕೆ ಬೇಕಾದ ಬಾಳೆಹಣ್ಣು ಡಜನ್‌ಗೆ 80-100ರೂ., ಬಟನ್ ಗುಲಾಬಿ ಕೆ.ಜಿ.ಗೆ 400-600ರೂ., ಸೇವಂತಿಗೆ ಹಾಗೂ ಚಂಡೆ ಹೂವಿನಹಾರ ಮಾರಿಗೆ 40ರೂ., ಮಲ್ಲಿಗೆ ಮಾರಿಗೆ 100ರೂ., ಸುಗಂಧರಾಜ, ಮಲ್ಲಿಗೆ, ಗುಲಾಬಿಯ ಸಣ್ಣ ಹಾರಗಳು 200ರಿಂದ 500ರೂ., ಸೇಬು 150ರಿಂದ 250ರೂ., ಬಾಳೆಕಂಬ ಜೋಡಿಗೆ 30-50ರೂ.ನಂತೆ ಶುಕ್ರವಾರ ಮಾರಾಟಮಾಡಲಾಯಿತು.

## ಸಂಭ್ರಮದ ಗೌರಿ ಹಬ್ಬ

ದಾವಣಗೆರೆ, ಸೆ.6-ಭಾದ್ರಪದ ಮಾಸದ ಚತುರ್ಥಿಯ ಮುನ್ನಾ ದಿನ ಬರುವ ಗೌರಿ ಹಬ್ಬ, ಮುತ್ತೈದೆಯರಿಗೆ ಸಕಲ ಸೌಭಾಗ್ಯ ನೀಡುವ ಗೌರಿ ಹಬ್ಬವನ್ನು ಸ್ವರ್ಣ ಗೌರಿ ವ್ರತದ ಮೂಲಕ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ಶಿವನನ್ನು ವರಿಸಿ ಕೈಲಾಸದಲ್ಲಿ ನೆಲೆಸಿರುವ ಗೌರಿ ವರ್ಷಕ್ಕೊಮ್ಮೆ ತನ್ನ ತವರಾದ ಭೂಮಿಗೆ ಬಂದು ಪೂಜೆ ಸ್ವೀಕರಿಸಿ, ಹೆಣ್ಣುಮಕ್ಕಳಿಂದ ಬಾಗಿನ ಪಡೆದು ಸಂತೃಪ್ತಳಾಗಿ ಕೈಲಾಸಕ್ಕೆ ಹೋಗುತ್ತಾಳೆ ಎಂಬ ನಂಬಿಕೆ ಇದೆ. ನಗರದಲ್ಲಿ ಮಹಿಳೆಯ ಮನೆಗಳಲ್ಲಿ ಕಲಶ ಪ್ರತಿಷ್ಠಾಪಿಸಿ, ಪೂಜಿಸಿ ಮುತ್ತೈದೆಯರಿಗೆ ಬಾಗೀನ ಕೊಡುವ ಸಂಪ್ರದಾಯ ಎಲ್ಲೆಡೆ ಕಂಡು ಬಂತು.

ಹಬ್ಬಕ್ಕೆ ಅವಶ್ಯವಾದ ಹೂವು, ಹಣ್ಣು, ಬಳೆ, ಸೀರೆ ಮತ್ತಿತರ ವಸ್ತುಗಳ ಬೆಲೆ ಗಗನಕ್ಕೇರಿದರೂ ಸಂತಸ ಕುಂದಿರಲಿಲ್ಲ.

## ಗಣಪತಿ ವಿಗ್ರಹಗಳ ವಿಸರ್ಜನೆಗೆ ಮಹಾನಗರ ಪಾಲಿಕೆ ಸ್ಥಳ ನಿಗದಿ

**(3ನೇ ಪುಟದಿಂದ)** ಬಡಾವಣೆ ಬಸವೇಶ್ವರ ವೃತ್ತ, ಕಾಯಿಪೇಟೆ ಗಣೇಶ ಹೋಟೆಲ್ ಹತ್ತಿರ, ಬಂಬೂ ಬಜಾರ್ ಬನ್ನಿಮರದ ಹತ್ತಿರ, ರಿಂಗ್ ರಸ್ತೆ, ಎಸ್. ಎಸ್ ಲೇಔಟ್. ಬಕೇಶ್ವರ ಸ್ಕೂಲ್ ಮುಂಭಾಗ, ಎಂ.ಸಿ.ಸಿ ಎ. ಬ್ಲಾಕ್, ಜಯದೇವ ವೃತ್ತ, ಕೆ.ಬಿ. ಬಡಾವಣೆ. ಡಿ.ಸಿ.ಎಂ ಲೇಔಟ್ ಸರ್ಕಲ್, ಡಿಸಿಎಂ ಲೇಔಟ್ ಸರ್ಕಾರಿ ಶಾಲೆ ಹತ್ತಿರ, ಆವರಗೆರೆ ಪಂಚಮುಖಿ ಆಂಜನೇಯ ದೇವಸ್ಥಾನದ ಹತ್ತಿರ, ಸರಸ್ವತಿ ಬಡಾವಣೆ. ಸಂಜೀವಿನಿ ಆಂಜನೇಯ ದೇವಸ್ಥಾನ, ಶಿವಕುಮಾರ ಸ್ವಾಮಿ ಬಡಾವಣೆ, ದುರ್ಗಾಂಬಿಕ ದೇವಸ್ಥಾನದ ಹತ್ತಿರ, ನಿಟುವಳ್ಳಿ, ಹೆಚ್.ಕೆ.ಆರ್. ಸರ್ಕಲ್, ನಿಟ್ಟುವಳ್ಳಿ ಡಾಂಗೆ ಪಾರ್ಕ್, ಕೆಟಿಜೆ ನಗರ. ಬಾಪೂಜಿ ಶಾಲೆ ಹತ್ತಿರ, ಕುವೆಂಪು ನಗರ. ಗುಂಡಿ ಮಹಾದೇವಪ್ಪ ಸರ್ಕಲ್, ಎಂ.ಸಿ.ಸಿ. ಎ ಬ್ಲಾಕ್, ಈಶ್ವರ ಪಾರ್ವತಿ ದೇವಸ್ಥಾನದ ಹತ್ತಿರ, ವಿದ್ಯಾನಗರ, ಆಂಜನೇಯ ದೇವಸ್ತಾನದ ಹತ್ತಿರ, ಆಂಜನೇಯ ಬಡಾವಣೆ. ಬಾಪೂಜಿ ಬ್ಯಾಂಕ್ ಹತ್ತಿರ, ಬಿ.ಐ.ಇ.ಟಿ ರಸ್ತೆ, ಆಂಜನೇಯ ಬಡಾವಣೆ. ಶ್ರೀರಾಮ ಮಂದಿರದ ಹತ್ತಿರ, ಶಾಮನೂರು ಆಂಜನೇಯ ದೇವಸ್ಥಾನದ ಹತ್ತಿರ, ಹಳೇ ಕುಂದುವಾಡ. ಈ ಸ್ಥಳಗಳಲ್ಲಿ ವಿಸರ್ಜನೆ ಮಾಡುವಂತೆ ಪಾಲಿಕೆ ಆಯುಕ್ತೆ ರೇಣುಕಾ ತಿಳಿಸಿದ್ದಾರೆ.

# ದರ್ಶನಕ್ಕೆ ಸಿದ್ಧವಾಗಿವೆ ಬಹುರೂಪಿ ವಿನಾಯಕನ ಮೂರ್ತಿಗಳು

**(3ನೇ ಪುಟದಿಂದ)** ಹಿಂದೂ ಯುವ ಶಕ್ತಿ ವತಯಿಂದ ತೊಗಟವೀರ ಸಮುದಾಯ ಭವನದಲ್ಲಿ 33ನೇ ವರ್ಷದ ಶ್ರೀ ವಿನಾಯಕ ಮಹೋತ್ಸವ ಆಚರಿಸಲಾಗುತ್ತಿದೆ. ಕಳೆದ 26 ವರ್ಷಗಳಿಂದ ವಿಶೇಷವಾಗಿ ಪೂಜಾ ಸಾಮಗ್ರಿಗಳ್ನು ಬಳಸಿ ಗಣೇಶನ ಮೂರ್ತಿ ಪ್ರತಿಷ್ಠಾಪಿಸುತ್ತಿದ್ದು, ಈ ವರ್ಷ 51 ಕೆ.ಜಿ. ಒಣ ದ್ರಾಕ್ಷಿ ಬಳಸಿ 12 ಅಡಿ ಎತ್ತರದ ಗಣೇಶನನ್ನು ನಿರ್ಮಿಸಲಾಗಿದೆ. ಸೆ.17ರವರೆಗೆ ವೀಕ್ಷಣೆಗೆ ಅವಕಾಶವಿದೆ. 16ರಂದು ಸೋಮವಾರ ಗಣಹೋಮ, ಅನ್ನ ಸಂತರ್ಪಣೆ ಇದ್ದು, 17ರಂದು ಹೊರ ರಾಜ್ಯದ ಜಾನಪದ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಸಿ, ವಿಸರ್ಜಿಸಲಾಗುತ್ತದೆ.

**ರಾಂ ಅಂಡ್ ಕೋ ವೃತ್ತ;** ನಗರದ ರಾಂ ಅಂಡ್ ಕೋ ವೃತ್ತದಲ್ಲಿ 32ನೇ ವರ್ಷದ ವಿನಾಯಕ ಮ ಹೋತ್ಸವ ಆಚರಿಸಲಾಗುತ್ತಿದೆ.

8 ಎಡಿ ಎತ್ತರದ, ವಿರಾಜಮಾನವಾಗಿ ಕುಳಿತಿ ರುವ ಆಕರ್ಷಕ ಗಣಪತಿ ಮೂರ್ತಿ ಪ್ರತಿಷ್ಠಾಪಿಸ ಲಾಗುತ್ತಿದೆ. ಪ್ರತಿ ದಿನ ಸಂಜೆ 'ಭಗೀರಥ ಪ್ರಯತ್ನ' ಕುರಿತ ನೃತ್ಯ ರೂಪಕ ಇರಲಿದೆ. ಸೆ.11ರಂದು ಅನ್ನ ಸಂತರ್ಪಣೆ, ಸೆ.17 ರಂದು ವಿಸರ್ಜನೆ ನಡೆಯಲಿದೆ.

**ಹಿಂದೂ ಯುವ ಸೇನೆ:** ಎಂ.ಸಿ.ಸಿ. ಎ ಬ್ಲಾಕ್ ಸೂಪರ್ ಮಾರ್ಕೆಟ್ ಬಳಿಯ ಹಿಂದೂ ಯುವ ಸೇನೆ ವತಿಯಿಂದ 17ನೇ ವರ್ಷದ ವಿನಾಯಕ ಮಹೋತ್ಸವ ಆಚರಿಸಲಾಗುತ್ತಿದೆ.

ಅಂಧ ಹಾಗೂ ಅನಾಥ ಮಕ್ಕಳಿಗೆ ಫುಡ್ ಕಿಟ್ ವಿತರಿಸಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ. ಸೆ.14ರಂದು ರವಿ ಬೆಣ್ಣೆದೋಸೆ ಹೋಟೆಲ್ ವತಿಯಿಂದ ದೋಸೆ ವಿತರಣೆ ಕಾರ್ಯಕ್ರಮವಿದೆ. 17 ರಂದು ಸಂಜೆ 7ಕ್ಕೆ ವಿಶೇಷ ದೀಪೋತ್ಸವವಿದೆ. ದಿ.20 ರಂದು ಅನ್ನ ಸಂತರ್ಪಣೆ ನಂತರ. ಸೆ.22ರಂದು ಬೃಹತ್ ಶೋಭಾಯಾತ್ರೆ ಮೂಲಕ ವಿಸರ್ಜನೆ ನಡೆಯಲಿದೆ.

**ಶ್ರೀ ವೀರ ವರಸಿದ್ಧಿ ಸಮಿತಿ:** ವಿನೋಬನಗರದ 2ನೇ ಮುಖ್ಯ ರಸ್ತೆಯಲ್ಲಿ ಶ್ರೀ ವೀರ ವರಸಿದ್ಧಿ ವಿನಾಯಕ ಸೇವಾ ಸಮಿತಿಯಿಂದ 32ನೇ ವರ್ಷದ ಗಣೇಶೋತ್ಸವ ಆಚರಿಸಲಾಗುತ್ತಿದೆ. ಸೆ.13ರಂದು ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಸಮುದಾಯ ಭವನದಲ್ಲಿ ಅನ್ನಸಂತ ರ್ಪಣೆ ಏರ್ಪಡಿಸಲಾಗಿದೆ. ದಿ.15ರ ಭಾನುವಾರ ಶೋಭಾ ಯಾತ್ರೆ ಮೂಲಕ ಗಣೇಶನ ಮೂರ್ತಿ ವಿಸರ್ಜನೆ ನಡೆಯಲಿದೆ. ಪ್ರತಿ ದಿನ ಸಂಜೆ ದೃಶ್ಯಾವಳಿಗಳ ಪ್ರದರ್ಶನ ಇರಲಿದೆ.

ನಗರದ ಶ್ರೀಕೋದಂಡರಾಮ ದೇವಸ್ಥಾನದಲ್ಲಿ ಗಣೇಶನ ಪ್ರತಿಷ್ಠಾಪನೆ ಜೊತೆಗೆ ಪ್ರತಿ ದಿನ ಸಂಜೆ ವಾಲಿ ಸಂಹಾರ ಕಥಾನಕ ಪ್ರದರ್ಶನ ನಡೆಯಲಿದೆ.

# ಎಆರ್‌ಜಿ ಕಾಲೇಜಿನಲ್ಲಿಂದು 50 ನೇ ಗಣೇಶೋತ್ಸವ

ದಾವಣಗೆರೆ, ಸೆ.6- ನಗರದ ಎ.ಆರ್.ಜಿ. ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ನಾಳೆ ದಿನಾಂಕ 7 ರಂದು ಬೆಳಿಗ್ಗೆ 11 ಗಂಟೆಗೆ 50 ನೇ ವರ್ಷದ ಗಣೇಶೋತ್ಸವಕ್ಕೆ ಚಾಲನೆ ನೀಡಲಾಗುವುದು ಎಂದು ಸಂಘದ ಅಧ್ಯಕ್ಷ ಎಸ್.ಬಿ. ನಾಗರಾಜ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಪ್ರಾಚಾರ್ಯ ಬೋರಪ್ಪ ಅವರು, ಗಣೇಶೋತ್ಸವದ ಎರಡನೇ ದಿನವಾದ ನಾಡಿದ್ದು ದಿನಾಂಕ 8 ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಏರ್ಪಡಿಸಿರುವ ಅನ್ನ ಸಂತರ್ಪಣೆಗೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ ಚಾಲನೆ ನೀಡಲಿದ್ದಾರೆ ಎಂದರು.

ಸೆ.9 ರಂದು ಬೆಳಿಗ್ಗೆ 11 ಕ್ಕೆ ಗಣಪತಿ ವಿಸರ್ಜನೆಯ ಮೆರವಣಿಗೆಗೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಚಾಲನೆ ನೀಡಲಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಹೆಚ್.ಎಂ. ಚಿರಂಜೀವಿ, ಪಿ. ನವೀನ್, ಆರ್.ಎಂ. ಸಚಿನ್, ಎಸ್.ಮಣಿಕಂಠ, ಎಂ.ಮೋಹನ್ ಮತ್ತಿತರರು ಉಪಸ್ಥಿತರಿದ್ದರು.

# ಪುರಸಭೆ ಅಧ್ಯಕ್ಷರಾಗಿ ಮೈಲಪ್ಪ

**(3ನೇ ಪುಟದಿಂದ)** ಸಾಧ್ಯವಾಗಿದೆ.

**ಕೈ ಎತ್ತುವ ಮೂಲಕ ಚುನಾವಣೆ :** ಉಪಾಧ್ಯಕ್ಷ ಸ್ಥಾನಕ್ಕೆ ಕೈ ಎತ್ತುವ ಮೂಲಕ ನಡೆದ ಚುನಾವಣೆಯಲ್ಲಿ ಲೋಕಸಭಾ ಸದಸ್ಯೆ ಪ್ರಭಾ ಮಲ್ಲಿಕಾರ್ಜುನ, ಶಾಸಕ ಶಾಂತನಗೌಡ, ಸದಸ್ಯರಾಗಿದ್ದ ಮೈಲಪ್ಪ, ರಾಜೇಂದ್ರ, ತನ್ವೀರ ಅಹಮದ್, ಹೊಸಕೇರಿ ಸುರೇಶ್, ಧರ್ಮಣ್ಣ, ಎಂ. ಸುರೇಶ್, ಉಷಾಗಿರೀಶ ಪಾಲ್ಗೊಂಡಿದ್ದರು. ಮತದಾನದ ಸಂದರ್ಭ ಬಿಜೆಪಿಯಿಂದ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಅಭ್ಯರ್ಥಿ ಸೇರಿದಂತೆ ಎಲ್ಲಾ ಸದಸ್ಯರು ಚುನಾವಣೆಯಿಂದ ಹೊರಗುಳಿದಿದ್ದರು.

# ಚಿತ್ರದುರ್ಗದಲ್ಲಿ ನಾಳೆ ಪತ್ರಿಕಾ ವಿತರಕರ ರಾಜ್ಯ ಸಮ್ಮೇಳನ

ಚಿತ್ರದುರ್ಗ, ಸೆ. 6- ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ, ಚಿತ್ರದುರ್ಗ ಜಿಲ್ಲಾ ಕಾರ್ಯನಿರತ ಪತ್ರಿಕೆ ಹಂಚಿಕೆದಾರರ, ವಿತರಕರ ಸಂಘದ ಸಹಯೋಗದಲ್ಲಿ ನಾಡಿದ್ದು ದಿನಾಂಕ 8 ರ ಭಾನುವಾರ ನಗರದ ಮುರುಘಾ ಮಠದ ಅನುಭವ ಮಂಟಪದಲ್ಲಿ ಪತ್ರಿಕಾ ವಿತರಕರ 4 ನೇ ರಾಜ್ಯ ಸಮ್ಮೇಳನ ಆಯೋಜಿಸಲಾಗಿದೆ.

ಬೆಳಿಗ್ಗೆ 11.30 ಕ್ಕೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಕಾರ್ಯಕ್ರಮ ವನ್ನು ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಸಚಿವರಾದ ಡಿ. ಸುಧಾಕರ್, ಸಂತೋಷ್ ಲಾಡ್, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಸಂಸದ ಗೋವಿಂದ ಕಾರಜೋಳ, ಶಾಸಕರಾದ ಕೆ.ಸಿ. ವೀರೇಂದ್ರ, ಜಿ.ಟಿ. ಗೋವಿಂದಪ್ಪ, ಬಿ. ರಘುಮೂರ್ತಿ, ಡಾ.ಎಂ. ಚಂದ್ರಪ್ಪ, ಎನ್.ವೈ. ಗೋಪಾಲಕೃಷ್ಣ, ಕೆ.ಸಿ.ನವೀನ್, ಡಿ.ಟಿ. ಶ್ರೀನಿವಾಸ್, ಡಾ.ಬಿ. ಯೋಗೇಶ್ ಬಾಬು, ರಾಜಣ್ಣ, ಜಿ. ಎಸ್. ಮಂಜುನಾಥ್ ಮತ್ತಿತರರು ಭಾಗವಹಿಸಲಿದ್ದಾರೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಶಂಭುಲಿಂಗ, ತಿಪ್ಪೇಸ್ವಾಮಿ ಮತ್ತಿತರರು ಭಾಗವಹಿಸಲಿದ್ದಾರೆ.

ಮಧ್ಯಾಹ್ನ 2 ಗಂಟೆಗೆ ಪ್ರತಿಭಾ ಪುರಸ್ಕಾರ, 3 ಗಂಟೆಗೆ ಮೊದಲ ಗೋಷ್ಠಿ ನಡೆಯಲಿದೆ. ಕೆ.ವಿ. ಪ್ರಭಾಕರ್ ಗೋಷ್ಠಿ ಉದ್ಘಾಟಿಸುವರು. ಡಾ. ಬಸವ ರಮಾನಂದ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದು, ಸಂಗಮ್ ಸುರೇಶ್, ಬಿ.ದಿನೇಶ್ ಗೌಡಗೆರೆ, ಅಹೋಬಲಪತಿ, ಷಣ್ಮುಖಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.


## ಹೊಸ ಧಾರಾವಾಹಿ 'ದೃಷ್ಟಿಬೊಟ್ಟು'

ದಾವಣಗೆರೆ, ಸೆ. 6 - ಕಲರ್ಸ್ ಕನ್ನಡ ವಾಹಿನಿಯು ಈಗ ಮತ್ತೊಂದು ಹೊಸ ಧಾರಾವಾಹಿ 'ದೃಷ್ಟಿಬೊಟ್ಟು' ಇದೇ ದಿನಾಂಕ 9ರಿಂದ ಸೋಮವಾರದಿಂದ ಶನಿವಾರ ದವರೆಗೆ ಪ್ರತಿ ಸಂಜೆ 6.30ಕ್ಕೆ ಪ್ರಸಾರವಾಗಲಿದೆ.ಕಿರುತೆರೆ ನಟ ವಿಜಯ್ ಸೂರ್ಯ. ನಾಯಕಿ ಪಾತ್ರದಲ್ಲಿ ಅರ್ಪಿತಾ ಮೋಹಿತೆ ಎಂಬ ಹೊಸ ನಟಿ ಕಾಣಿಸಿಕೊಂಡಿದ್ದಾರೆ. ಅಲ್ಲದೇ ಹಿರಿಯ ನಟಿ ಅಂಬಿಕಾ ಕೂಡ ಕಿರುತೆರೆಗೆ ಕಾಲಿಡುತ್ತಿದ್ದಾರೆ.

ದೀಪಶ್ರೀ, ರಾಘು ಶಿವಮೊಗ್ಗ, ಅಶೋಕ್ ಹೆಗ್ಡೆ ಸೇರಿದಂತೆ ಅನೇಕ ಕಿರಿ ಹಿರಿ ನಟ-ನಟಿಯರು ಮನಸೂರೆಗೊಳ್ಳಲಿದ್ದಾರೆ.

ಈ ಕುರಿತು ಮಾತನಾಡಿರುವ ಕಲರ್ಸ್ ಕನ್ನಡದ ಬ್ಯುಸಿನೆಸ್ ಹೆಡ್ ಪ್ರಶಾಂತ್ ನಾಯಕ್, ಎರಡು ವಿಭಿನ್ನ ಕೌಟುಂಬಿಕ ಹಿನ್ನೆಲೆಗಳಿಂದ ಬಂದ ದೃಷ್ಟಿ ಎಂಬ ಹುಡುಗಿ ಹಾಗೂ ದತ್ತ ಶ್ರೀರಾಮ್ ಪಾಟೀಲ್ ಎಂಬ ಹುಡುಗನ ಬದುಕುಗಳು ಸಂಧಿಸಿದಾಗ ನಡೆಯುವ ಕುತೂಹಲಕರ ಕಥಾನಕವನ್ನು 'ದೃಷ್ಟಿಬೊಟ್ಟು' ಎಳೆಎಳೆಯಾಗಿ ಅನಾವರಣಗೊಳಿಸುತ್ತಾ ಹೋಗುತ್ತದೆ.

# ನಗರದಲ್ಲಿ ರಾಜ್ಯ ಬಿಜೆಪಿ ಪ್ರಬುದ್ಧರ ಪ್ರಕೋಷ್ಠದ ರಾಜ್ಯ ಸಮಿತಿ ಸಭೆ




ದಾವಣಗೆರೆ, ಸೆ.6- ಬಿಜೆಪಿ ಪ್ರಬುದ್ಧರ ಪ್ರಕೋಷ್ಠದ ರಾಜ್ಯ ಸಮಿತಿ ಸಹ - ಸಂಚಾಲಕರಾದ ಬನಪ್ಪ ಅವರು ನಗರದ ಜಿಲ್ಲಾ ಬಿಜೆಪಿ ಕಚೇರಿಗೆ ಇಂದು ಆಗಮಿಸಿ, ಪ್ರಕೋಷ್ಟ ಜಿಲ್ಲಾ ಮಂಡಲ ಸಮಿತಿ ರಚನೆ ಸಂಘಟನೆ ಬಗ್ಗೆ ಚರ್ಚಿಸಿದರು.

ಈ ಸಭೆಯಲ್ಲಿ ಪ್ರಬುದ್ಧ ಪ್ರಕೋಷ್ಟ ರಾಜ್ಯ ಸಮಿತಿ ಸದಸ್ಯ ಲೋಕೇಶ್, ಪ್ರಬುದ್ಧರ ಪ್ರಕೋಷ್ಟ ಜಿಲ್ಲಾ ಸಂಚಾಲಕ ಹೆಚ್.ಎಸ್. ಲಿಂಗರಾಜು, ಸಹ ಸಂಚಾಲಕ ಗೌಳಿ ಲಿಂಗರಾಜು, ಬಿಜೆಪಿ ಜಿಲ್ಲಾ ಪ್ರದಾನ ಕಾರ್ಯದರ್ಶಿ ಅನಿಲ್ ಕುಮಾರ್ ನಾಯ್ಕ, ಅವರು, ಪ್ರಕೋಷ್ಟ ಜಿಲ್ಲಾ ಸಂಯೋಜಕ ಹನುಮಂತ ನಾಯ್ಕ, ಪಕ್ಷದ ಪ್ರಮುಖ ಷಣ್ಮುಖಯ್ಯ, ಕೃಷ್ಣಮೂರ್ತಿ ಪವಾರ್, ಗಂಗಾಧರ್, ಕೃಷ್ಣಕುಮಾರ್ ಇನ್ನೂ ಮುಂತಾದವರು ಉಪಸ್ಥಿತರಿದ್ದರು.


## ನಾಳೆ ಸಂಗೀತ ಕಾರ್ಯಕ್ರಮ

ದಾವಣಗೆರೆ ದೊಡ್ಡಪೇಟೆಯ ಶ್ರೀ ವಿನಾಯಕ ದೇವಸ್ಥಾನದ ಸೇವಾ ಸಂಘ ಟ್ರಸ್ಟ್ ವತಿಯಿಂದ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ 10.30 ರಿಂದ ಶ್ರೀ ವಿಘ್ನೇಶ್ವರಸ್ವಾಮಿಯನ್ನು ಮೆರವಣಿಗೆ ಮೂಲಕ ಕರೆತಂದು ಭವ್ಯ ಮಂಟಪದಲ್ಲಿ ಪ್ರತಿಷ್ಠಾಪಿಸಲಾಗುವುದು. ನಾಳೆ ಭಾನುವಾರ ರಾತ್ರಿ 7.30 ರಿಂದ ಆನಂದ ಆರ್. ಪಾಟೀಲ್ ಮತ್ತು ಸಂಗಡಿಗರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ.

**ಗೌರಿ-ಗಣೇಶ ಹಬ್ಬದ ಶುಭಾಶಯಗಳು**



ಸರ್ವರಿಗೂ ಗೌರಿ-ಗಣೇಶ ಹಬ್ಬದ ಹೃದಯಪೂರ್ವಕ ಶುಭಾಶಯಗಳು...



**ಪರಶುರಾಮಪ್ಪ ಪೂಜಾರ್**
ಜಿಲ್ಲಾ ಪತ್ರ ಬರಹಗಾರರು
ಉಪ ನೋಂದಣಿ ಕಛೇರಿ ಆವರಣ,
ದಾವಣಗೆರೆ. ಮೊ. : 89703 96509

**ನಮ್ಮೆಲ್ಲಾ ಗ್ರಾಹಕ ಸದಸ್ಯರುಗಳಿಗೆ ಗೌರಿ-ಗಣೇಶ ಹಬ್ಬದ ಶುಭಾಶಯಗಳು**

**ದಿ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ**

# ಎನ್.ಎಫ್-01, 02, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, 1ನೇ ಮಹಡಿ, ನಿಟುವಳ್ಳಿ ರಸ್ತೆ, ದಾವಣಗೆರೆ-577 002. ಫೋ. : 08192 469089

**8ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ**

ದಿ ವೆಜಿಟೇಬಲ್ ಪ್ಲಾಂಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ದಾವಣಗೆರೆ ಇದರ ವಾರ್ಷಿಕ ಮಹಾಸಭೆಯನ್ನು ದಿನಾಂಕ : 14.09.2024ನೇ ಶನಿವಾರದಂದು ಬೆಳಿಗ್ಗೆ 11.30 ಗಂಟೆಗೆ ಶ್ರೀ ಶಂಕರ ಮಠ, ಜಯದೇವ ಸರ್ಕಲ್, ದಾವಣಗೆರೆ ಇಲ್ಲಿ ಕರೆಯಲಾಗಿದೆ.
ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಸೂ. : ಪ್ರಕಟಿತ ಆಸ್ತಿ - ಜವಾಬ್ದಾರಿ ತಃಖ್ತೆ ಅಥವಾ ಅದಕ್ಕೆ ಸಂಬಂಧಪಟ್ಟ ತಃಖ್ತೆಗಳ ಬಗ್ಗೆ ಅಥವಾ ಇತರೆ ಯಾವುದೇ ವಿಷಯದ ಬಗ್ಗೆ ಸುಸ್ತಿದಾರರಲ್ಲದ ಸದಸ್ಯರು ಬಯಸಿದಲ್ಲಿ ಸಭೆಯು ನಡೆಯುವುದಕ್ಕೆ 5 ದಿವಸ ಮುಂಚಿತವಾಗಿ ಸಂಸ್ಥೆಗೆ ಲಿಖಿತವಾಗಿ ತಿಳಿಸತಕ್ಕದ್ದು. ಅಧ್ಯಕ್ಷರ ಅನುಮತಿ ಮೇರೆಗೆ ಬಂದ ವಿಷಯಗಳನ್ನು ಚರ್ಚಿಸಬಹುದಾಗಿದೆ. ನಂತರ ಬಂದ ವಿಷಯವನ್ನು ಪ್ರಸ್ತಾಪಿಸಲು ಅವಕಾಶವಿರುವುದಿಲ್ಲ.

ವಿ.ಸೂ. : ಈಗಾಗಲೇ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ಕಾರ್ಯಕಾರಿ ಮಂಡಳಿಯ ಆದೇಶದ ಮೇರೆಗೆ
ಆರ್. ವೆಂಕಟಾಚಲಮೂರ್ತಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ

## ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಗೌರವ ಸಲಹೆಗಾರರಾಗಿ ಹೆಚ್.ಕೆ. ಲಿಂಗರಾಜ್



ದಾವಣಗೆರೆ, ಸೆ. 6- ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಹೆಚ್.ಕೆ. ಲಿಂಗರಾಜ್ ಅವರನ್ನು ದಾವಣಗೆರೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಗೌರವ ಸಲಹೆಗಾರರನ್ನಾಗಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಸಿ. ಸೋಮಶೇಖರ್ ಅವರು ನೇಮಕ ಮಾಡಿದ್ದಾರೆ.


ಈ ಸಂದರ್ಭದಲ್ಲಿ ಶರಣ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಸೋಮಶೇಖರ್ ಸಿ. ಗಾಂಜಿ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಗಾಯತ್ರಿ ವಸ್ತ್ರದ್ ಅವರುಗಳು ಲಿಂಗರಾಜು ಅವರನ್ನು ಅಭಿನಂದಿಸಿದ್ದಾರೆ.

## ನಗರದಲ್ಲಿ ಫುಟ್‌ಬಾಲ್ ಆಟಗಾರ ಮೆಸ್ಸಿ ಗಣೇಶ ಮೂರ್ತಿ ಪ್ರತಿಷ್ಠಾಪನೆ



ದಾವಣಗೆರೆಯ ಎಸ್. ನಿಜಲಿಂಗಪ್ಪ ಬಡಾವಣೆಯ ಫುಟ್‌ಬಾಲ್ ಆಟಗಾರ ಅಬ್ಬಣ್ಣ ಅವರ ಮನೆಯಲ್ಲಿ ಅರ್ಜೆಂಟೇನಾದ ಫುಟ್‌ಬಾಲ್ ಆಟಗಾರ ಲಿಯನೋ ಮೆಸ್ಸಿ ಅವರ ಪ್ರತಿರೂಪದ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಿದ್ದು, ಗಣೇಶ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಫುಟ್‌ಬಾಲ್ ಆಟಗಾರ ಅಬ್ಬಣ್ಣ (70263 94474) ತಿಳಿಸಿದ್ದಾರೆ.


### ಗೌರಿ-ಗಣೇಶ ಹಬ್ಬದ ಶುಭಾಶಯಗಳು



ಸರ್ವರಿಗೂ ವಿನಾಯಕ ಚತುರ್ಥಿಯ ಭಕ್ತಿಪೂರ್ವಕ ಶುಭಾಶಯಗಳು...

**ಪವಾಡಪ್ಪ ತಿಪ್ಪೇಸ್ವಾಮಿ**


ದಸ್ತಾವೇಜು ಬರಹಗಾರರು,
ಸಬ್ ರಿಜಿಸ್ಟ್ರಾರ್ ಕಛೇರಿ ಆವರಣ,
ಪಿ.ಬಿ. ರಸ್ತೆ, ದಾವಣಗೆರೆ. ಮೊ.: 98443 31765



### ಗೌರಿ-ಗಣೇಶ ಹಬ್ಬದ ಶುಭಾಶಯಗಳು



ಭಗವಾನ್ ಗಣೇಶ ಸರ್ವರಿಗೂ ಅದೃಷ್ಟ ಮತ್ತು ಸಮೃದ್ಧಿಯನ್ನು ತರಲಿ... ಗೌರಿ- ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು...



**ಡಿ. ಕೆ. ಸಂಗಮೇಶ್ ಎಲಿಗಾರ್**

ಪತ್ರ ಬರಹಗಾರರು,
ಸಬ್ ರಿಜಿಸ್ಟ್ರಾರ್ ಕಚೇರಿ ಆವರಣ,
ಪಿ. ಬಿ. ರಸ್ತೆ, ದಾವಣಗೆರೆ. ಮೊ. : 98440 65710

Hero



WORLD'S NO.1* MOTORCYCLE

4 ಕೋಟಿ ಸಂತುಷ್ಟ ಗ್ರಾಹಕರು~

Splendor+ XTEC ಜೊತೆಗೂ ಸಹ

Flipkart ₹ 5000 ವರೆಗೆ ಕೊಡುಗೆˇ

Exchange Powered By Wheels of Trust^^ ಅತ್ಯುತ್ತಮ^^ ರೀಸೇಲ್ ವ್ಯಾಲ್ಯೂಗಾಗಿ ಸ್ಕ್ಯಾನ್ ಮಾಡಿ

INDIA'S FIRST 5 YEAR WARRANTY* *Conditions apply

WORLD'S NO.1 22 YEARS IN A ROW$ MOTORCYCLE & SCOOTER COMPANY

i3S Technology Idle-Stop-Start System

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or CALL TOLL-FREE 1800 266 0018 or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. ^^Based on offers from empaneled dealers on Wheels of Trust platform. $Highest sales for any 2 Wheeler Corporate Entity in the world for Calendar Year 2022 - Data source: DNA Consult & Advisory's report Assessment of Global Two Wheelers Market (CY22) ˇFinance scheme is at the sole discretion of financiers & subject to its respective terms & conditions. Offer is for limited period or till stock lasts. Offers amount & combination of offers may vary for model/variant & states. #HIPL stands for High Intensity Position Lamp. ~Mileage as per third party testing under standard conditions. ^Basis data available in public forum for products in 125cc Motorcycle segment.

SCAN TO KNOW MORE ASK FOR XTEC

AUTHORISED DEALERS: DAVANAGERE: RUTVI HERO PREMIA - PH: 9008030900. PRAKASHA HERO - PH: 9289922501. RUTVI HERO - PH: 9289923174

ASSOCIATE DEALER: CHANNAGIRI - PH: 9632760023.

ALSO AVAILABLE AT: HARAPPANAHALLI: PH - 9844794931. HARIHAR - PH: 9448316791. SANTEBENNUR - PH: 9972404824. JAGALUR - PH: 9980595001. HONNALI - PH: 9483051999.



**Commercial Purpose**
**To-Let (ಬಾಡಿಗೆಗೆ ಇದೆ)**
**Cellar Parking**
**Ground 1st 2nd 3rd Floor**
**8600 Sq.Ft**

Address : Opp. DRR Polytechnic, Hadadi Road, Davangere.

Contact :
Mob : 94483 31903, 77603 18229


### ಸಿದ್ದೇಶ್ ಹೆಚ್.ಎಂ. ನಿಧನ



ಜನನ 01-05-1976

ಮರಣ: 06-09-2024

ದಾವಣಗೆರೆ ಸಿಟಿ ವಿನೋಬನಗರ 2 ನೇ ಮೇನ್, 3 ನೇ ಕ್ರಾಸ್ ವಾಸಿ ಶ್ರೀ ಶಿವಾನಂದ ಸ್ವಾಮಿ ಹೆಚ್.ಎಂ. ಇವರ ಪುತ್ರ

**ಸಿದ್ದೇಶ್ ಹೆಚ್.ಎಂ. (48)**

ಇವರು ದಿನಾಂಕ: 06.09.2024 ಶುಕ್ರವಾರ ಸಂಜೆ 5.55ಕ್ಕೆ ಲಿಂಗೈಕ್ಯರಾಗಿರುತ್ತಾರೆ. ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಲಿಂಗೈಕ್ಯರ ಅಂತ್ಯಕ್ರಿಯೆಯನ್ನು ದಿನಾಂಕ: 07.09.2024 ಶನಿವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆಯ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು : ಭಿಕ್ಷಾವರ್ತಿ ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು


### ನಾಡಿನ ಸಮಸ್ತ ಜನತೆಗೆ ಗೌರಿ-ಗಣೇಶ ಚತುರ್ಥಿಯ ಹಾರ್ದಿಕ ಶುಭಾಶಯಗಳು...

A M BUILDERS



**AM Nallur Shantharam Retreat**

2 & 3 BHK Luxury & Spacious Apartment


Site Address :
No. 407, Nallur Shantharam Retreat,
Nallur Shantharam Road, 7th Main,
MCC 'A' Block, Davangere-577004



**AM Casa Luxuria**

2 & 3 BHK Luxury & Spacious Apartment

Site Address : # 1973, Ashraya Hospital Road,
MCC 'A' Block, Davangere-577004



**AM Fortune**

2 & 3 BHK Luxury & Spacious Apartment

Site Address :
Opposite Raghavendra College, SS layout, B
Block, Davangere-577004



**AM Virupaksha Exotica**

2 & 3 BHK Luxury & Spacious Apartment

Site Address : 17th Cross,
Taralabalu Badavane, Shiva Layout,
Behind Lakshmi Venkateshwara Granites,
Davangere-577004

97319 99918, 80502 22181

Office Address :

#1779/23, Nainika Primerose,
20th Cross, Vidyanagar main Road,
Last city bus stop, Davangere - 577005.

Info@ambuilderss.com
www.ambuilderss.com


## ಚಿರಸ್ಮರಣೆ



ಉಸಿರು ಹೋದರೂ ಹೆಸರು ಉಳಿಸಿದ

**ಲಿಂ|| ಶ್ರೀ ಶಾಮನೂರು ಕಲ್ಲೇಶಪ್ಪನವರು**

ಅಧ್ಯಕ್ಷರು, ದಾವಣಗೆರೆ ರೈತರ ಫಸಲುಗಳ ಪರಿವರ್ತನಾ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘ (ನಿ), ದಾವಣಗೆರೆ.
ನಿರ್ದೇಶಕರು, ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದಾವಣಗೆರೆ.

ನಿಧನ : 07-09-2020

ಉಸಿರು ಹೋದರೂ ಹೆಸರು ಉಳಿಸಿದ

**ಲಿಂ|| ಶ್ರೀಮತಿ ಶಾಮನೂರು ಪಾರ್ವತಮ್ಮ**

(ಲಿಂ|| ಶ್ರೀ ಶಾಮನೂರು ಕಲ್ಲೇಶಪ್ಪನವರ ಧರ್ಮಪತ್ನಿ)

ನಿಧನ : 14-05-2019

ನೀವು ನಮ್ಮನ್ನಗಲಿ ವರ್ಷಗಳು ಕಳೆದರೂ, ನಿಮ್ಮ ನೆನಪು ಸದಾ ಹಚ್ಚ ಹಸಿರಾಗಿದ್ದು, ನಿಮ್ಮ ತಾಳ್ಮೆ, ಸಹನೆ, ಪ್ರತಿಯೊಂದು ಹೆಜ್ಜೆಯೂ ನಮಗೆಲ್ಲಾ ಎಂದೆಂದಿಗೂ ಸ್ಫೂರ್ತಿ. ನಿಮ್ಮ ಪ್ರೀತಿಯ ನೆನಪೇ ನಮ್ಮ ಮನಸ್ಸಿಗೆ ಸಮಾಧಾನ. ಎಂದೆಂದಿಗೂ ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುವ

- ✦ ಶ್ರೀಮತಿ ಮೇಘನಾ ಮತ್ತು ಪವಿತ್ರ ಎಸ್.ಕೆ.
  ಅಧ್ಯಕ್ಷರು, ರೈತರ ಫಸಲುಗಳ ಪರಿವರ್ತನಾ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘ (ನಿ.) ದಾವಣಗೆರೆ.
- ✦ ಶ್ರೀಮತಿ ಶ್ವೇತ ಮತ್ತು ಪ್ರದೀಪ್ ಎಸ್.ಕೆ. ✦ ಡಾ|| ಟಿ.ಜಿ. ರವಿಕುಮಾರ್ (ಆರೈಕೆ ಹಾಸ್ಪಿಟಲ್ಸ್)
- ✦ ಗೌರಿ, ಸಮನ್ಯು, ಧನ್ವಿಕಾ, ಚಿರಂತನ್, ಅಭಿಜ್ಞಾನ್
- ✦ ಶ್ರೀ ಕಲ್ಲೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ (ರಿ.)
- ✦ ಶ್ರೀ ಕಲ್ಲೇಶ್ವರ ಎಂಟರ್‌ಪ್ರೈಸಸ್ ✦ ಶ್ರೀ ಕಲ್ಲೇಶ್ವರ ಡೆವಲಪರ್ ಮತ್ತು ಬಿಲ್ಡರ್ಸ್

**ಶಾಮನೂರು ವಂಶಸ್ಥರು, ಬಂಧು-ಮಿತ್ರರು**

KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas